(ಆ) ವಿಷಯ : ರಾಜ್ಯದಲ್ಲಿ ರಾಸಾಯನಿಕ ಗೊಬ್ಬರದ ಪೂರೈಕೆಗಾಗಿ ಹಣ ಬಿಡುಗಡೆ ಮಾಡುವ ಬಗ್ಗೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಉಪಾಧ್ಯಕ್ಷರೆ, ನಾನು ಗಮನ ಸೆಳೆದಿದ್ದು ಮಾನ್ಯ ಉಪಮುಖ್ಯಮಂತ್ರಿಗಳಿಗೆ. ಆದರೆ ಇದಕ್ಕೆ ಉತ್ತರ ಕೊಡುವುದು ಕೃಷಿ ಮಂತ್ರಿಗಳು. ಆದರೂ ಕೂಡ ಪರವಾಗಿಲ್ಲ. ಮಾನ್ಯ ಕೃಷಿ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಬಂಡೆಪ್ಪ ಕಾಂಶಪುರ್ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸ್ನೇಹಿತರು ಹಾಗೂ ಮಾಜಿ ಕೃಷಿ ಸಚಿವರು ರಸಗೊಬ್ಬರದ ಪೂರೈಕೆ ಸಲುವಾಗಿ ಹಣದ ಬೇಡಿಕೆ ಇದೆ ಎಂಬುದನ್ನು ಹೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ ರಾಜ್ಯದಲ್ಲಿ ರೈತರುಗಳಿಗೆ ಸಕಾಲದಲ್ಲಿ ಗೊಬ್ಬರ ಸರಬರಾಜು ಮಾಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈ ಒಂದು ಯೋಜನೆಗೆ ಈ ಸರ್ಕಾರ ಮೊಟ್ಟಮೊದಲಿಗೆ 25 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ರೂಪಿಸಿದ್ದು, ಇದರಲ್ಲಿ 12.5 ಕೋಟಿ ರೂಪಾಯಿ ಸರ್ಕಾರ ಕೊಡುತ್ತದೆ. ಉಳಿದ 12.5 ಕೋಟಿ ರೂಪಾಯಿಗಳನ್ನು ಮಾಜಿ ಸಚಿವರು ಅಧ್ಯಕ್ಷರಾಗಿರುವ ಫೆಡರೇಷನ್‌ನಿಂದ 12.5 ಕೋಟಿ ರೂ ಕೊಡಬೇಕಾಗುತ್ತದೆ. ಈ ಎರಡು ಸೇರಿಸಿ ಒಟ್ಟು 25 ಕೋಟಿ ರೂಪಾಯಿಗಳಷ್ಟು ಆವರ್ತನಿಧಿ ಇಡಬೇಕೆಂದು ತೀರ್ಮಾನ ಆಗಿತ್ತು. ಹಾಗೆಯೇ ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಸಲುವಾಗಿ 25 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಒದಗಿಸಿದ್ದಾರೆ. ಆದರೆ ಇದು ಮೊದಲನೇ ವರ್ಷವಾಗಿರುವುದರಿಂದ ಫೆಡರೇಷನ್ ಮತ್ತು ನಮ್ಮ ಅಗ್ರಿಕಲ್ಚರ್ ಇಲಾಖೆಯ ಅಧಿಕಾರಿಗಳ ಜೊತೆ ಸುಮಾರು ನಾಲ್ಕು ಸಭೆಗಳನ್ನು ಮಾಡಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು. ಕೆಲವು ಅಂದರೆ ಎರಡು-ಮೂರು ಅಬ್ಜಕ್ಷನ್ ಬಂದ ಮೇಲೆ ಅಪರ ಮುಖ್ಯ ಕಾರ್ಯದರ್ಶಿಯವರು ಮತ್ತು ಅಭಿವೃದ್ಧಿ ಆಯುಕ್ತರು ಸೇರಿ ಇದಕ್ಕೆ ಅಂತಿಮ ರೂಪರೇಷ ಕೊಟ್ಟು ಈ ದುಡ್ಡಿನ ಸಲುವಾಗಿ ಈಗ ಮತ್ತೆ ಆರ್ಥಿಕ ಇಲಾಖೆಗೆ ಹೋಗಿದೆ. ನನಗೆ ತಿಳಿದಮಟ್ಟಿಗೆ ಇನ್ನು ಸ್ವಲ್ಪ ದಿವಸದಲ್ಲಿ ಈ ಹಣವನ್ನು ಬಿಡುಗಡೆ ಮಾಡುತ್ತೇನೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಉಪಾಧ್ಯಕ್ಷರೆ, ಇಡೀ ರಾಜ್ಯದಲ್ಲಿ ಮಳೆ ಚೆನ್ನಾಗಿ ಆಗುತ್ತಿದೆ. ಕಳೆದ ಮೂರು ದಿವಸಗಳ ಹಿಂದೆ ಗೊಬ್ಬರದ ಕೊರತೆ ಬಗ್ಗೆ ಎಲ್ಲರೂ ಪ್ರಸ್ತಾಪ ಮಾಡಿದರು. ಆ ಸಂದರ್ಭದಲ್ಲಿ ಅವರು ಇರಲಿಲ್ಲ. ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಒಂದು ಸ್ಕೀಂ ತಂದು, ಫೆಡರೇಷನ್ ಮೂಲಕ ಮಾರ್ಚ್ ಒಳಗಾಗಿ ಎಲ್ಲಾ ರೀತಿಯಾದ ಗೊಬ್ಬರವನ್ನು ತಾಲ್ಲೂಕುಗಳಲ್ಲಿ ಸ್ಟಾಕ್ ಮಾಡಬೇಕೆಂಬ ಉದ್ದೇಶದಿಂದ ಈ ಒಂದು ಸ್ಕೀಂನ್ನು ಕ್ರಿಯೇಟ್ ಮಾಡಲಾಗಿತ್ತು. ಆದರೆ, ಜೂನ್ ಆಗಿ ಇನ್ನು ಎರಡು ಮೂರು ದಿವಸಗಳಲ್ಲಿ ಜುಲೈ ತಿಂಗಳಿಗೆ ಹೋಗುತ್ತಿದ್ದೇವೆ. ಆದರೆ, ಇದುವರೆಗೂ ಇದಕ್ಕೆ ಹಣ ಬಿಡುಗಡೆ ಆಗಿಲ್ಲ. ನಿಮ್ಮ ಕೃಷಿ ಇಲಾಖೆಯಿಂದ ಏನೂ ತೊಂದರೆಯಾಗಿಲ್ಲ. ಆದರೆ ಹಣ ಬಿಡುಗಡೆಯಾಗಿಲ್ಲದೆ ಇರುವುದರಿಂದ ನಾನು ನೇರವಾಗಿ ಆರ್ಥಿಕ ಸಚಿವರು ಆಗಿರತಕ್ಕಂಥ ಮಾನ್ಯ ಉಪಮುಖ್ಯಮಂತ್ರಿಯವರ ಗಮನ

ಸೆಳೆದಿದ್ದೆ. ಆದರೆ ಅವರು ಇದಕ್ಕೆ ಉತ್ತರ ಕೊಡುತ್ತಿಲ್ಲ. ಈ 25 ಕೋಟಿ ರೂಪಾಯಿಗಳಲ್ಲಿ ಸರ್ಕಾರದ ಕಡೆಯಿಂದ 12.5 ಕೋಟಿ ರೂಪಾಯಿ ಮತ್ತು ನಮ್ಮ ಕಡೆಯಿಂದ 12.5 ಕೋಟಿ ರೂಪಾಯಿ ಕೊಟ್ಟರೂ ಕೂಡ ಸುಮಾರು 2.5 ಸಾವಿರ ಟನ್ ಗೊಬ್ಬರ ಬರುತ್ತದೆಯಷ್ಟೆ. ಇಫ್ಕೋ ಸಂಸ್ಥೆಯ ಮ್ಯಾನೆಜಿಂಗ್ ಡೈರೆಕ್ಟರ್ ರವರನ್ನು ಕರೆದುಕೊಂಡು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋದಾಗ ಅವರು ಕಮಿಟ್‌ಮೆಂಟ್ ಆಗಿದ್ದರು. ಅಂದರೆ, 7.5. ಸಾವಿರ ಟನ್ ಡಿ.ಎ.ಪಿ. 8 ಸಾವಿರ ಟನ್ ಯೂರಿಯಾ ಹಾಗೂ 6 ಸಾವಿರ ಟನ್ 20.20.0 ಕೊಡುತ್ತೇವೆಂದು ಕಮಿಟ್ ಆಗಿದ್ದರು. ಇಷ್ಟಕ್ಕೆ ಹಣ ಕೊಟ್ಟಿದ್ದರೆ ಇವತ್ತಿನ ದಿವಸ ಇಷ್ಟೊಂದು ಹಾಹಾಕಾರ ಇರುತ್ತಿರಲಿಲ್ಲ. ಆದರೂ ಕೂಡ ನಮ್ಮಲ್ಲಿರತಕ್ಕಂಥ ಅವೈಲಬಲ್ ಸೋರ್ಸ್‌ನಿಂದ ನಮ್ಮ ಕಡೆಯಿಂದ ಹಣ ಬಿಡುಗಡೆ ಮಾಡಿದ್ದೇವೆ. ಆದ್ದರಿಂದ ನೀವು ಈಗಲಾದರೂ ಕೂಡ ಬಿಡುಗಡೆ ಮಾಡಬೇಕು. ಆದರೆ, ನಿಮ್ಮದು ಏನಾಗಿದೆ ಎಂದರೆ ನಮ್ಮ ಕಡೆ ಒಂದು ಗಾದೆ ಮಾತು ಇದೆ. ಅದೇನೆಂದರೆ, ಕೆರೆ ಕೋಡಿ ಹೋದ ಮೇಲೆ ಬಲೆ ಹಿಡಿದುಕೊಂಡು ಹೋದರಂತೆ. ಆ ರೀತಿಯಾಗಿ ನಮ್ಮ ಕೃಷಿ ಮಂತ್ರಿಗಳು ಈಗ ಬಲೆ ಹಿಡಿದುಕೊಂಡು ಹೋಗುತ್ತಿದ್ದಾರೆ. ಏಕೆಂದರೆ, ಈಗಾಗಲೇ ಮೀನನ್ನು ಹಿಡಿದುಕೊಂಡು ಹೋಗಿದ್ದಾರೆ. ಈಗ ನಿಮಗೆ ಏನೂ ಸಿಗುವುದಿಲ್ಲ. ಇವತ್ತಿನದಿವಸ ಮಳೆ ಎಲ್ಲಾ ಕಡೆ ಚೆನ್ನಾಗಿ ಆಗಿದೆ. ಈಗ ಗೊಬ್ಬರದ ಅವಶ್ಯಕತೆ ಇದೆ. ಕನಿಷ್ಟಪಕ್ಷ ಇನ್ನು ಒಂದು ತಿಂಗಳೊಳಗಾಗಿ ಪೂರ್ತಿ ಗೊಬ್ಬರ ಬೇಕಾಗಿದ್ದು ನಿಮ್ಮ ವೈಯಕ್ತಿಕ ಪ್ರಭಾವವನ್ನು ಉಪಯೋಗಿಸಿ ಆರ್ಥಿಕ ಇಲಾಖೆಯಿಂದ ಹಣ ಬಿಡುಗಡೆ ಮಾಡಿಸಿದರೆ ಒಳ್ಳೆಯದು ನಾವು ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ಗೊಬ್ಬರವನ್ನು ಸ್ಟಾಕ್ ಇಡುವಂಥ ಕೆಲಸ ಮಾಡುತ್ತೇವೆ. ನಾವೂ ಕೂಡ ಇದಕ್ಕೋಸ್ಕರ 12.5 ಕೋಟಿ ರೂಪಾಯಿ ಇಟ್ಟಿದ್ದೇವೆ. ಮತ್ತೆ ಈ ಹಣ ಕೊಡುವುದಕ್ಕೆ ನಾವು ತಯಾರಿದ್ದೇವೆ ಎಂದು ಹೇಳುತ್ತಾ, ನೀವು ಈ ಹಣವನ್ನು ಯಾವತ್ತು ಬಿಡುಗಡೆ ಮಾಡುತ್ತೀರೆಂಬುದನ್ನು ನೇರವಾಗಿ ಹೇಳಬೇಕೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎನ್.ಎಸ್. ಜೋಸರಾಜ್ (ಮಾನ್ವಿ) : ಮಾನ್ಯ ಉಪಾಧ್ಯಕ್ಷರೆ, ಬೀಜದ ಕೊರತೆ ವಿಷಯ ಬಂದಾಗ ಕಳೆದ ಸಲ ಇದರ ಬಗ್ಗೆ ನಾವೆಲ್ಲರೂ ಕೂಡ ಮಾತನಾಡಿದ್ದೇವೆ. ಈಗಾಗಲೇ ಸನ್ಮಾನ್ಯ ಶ್ರೀನಿವಾಸಗೌಡರು ಹೇಳಿದಂತೆ, ನಮ್ಮ ಭಾಗಗಳಾದ ಗುಲ್ಬರ್ಗ ಮತ್ತು ರಾಯಚೂರು ಭಾಗದಲ್ಲಿ ಉತ್ತಮವಾದಂಥ ಮಳೆ ಬೇಗ ಆಗಿರುವುದರಿಂದ ತಕ್ಷಣಕ್ಕೆ ಬಿತ್ತನೆ ಮಾಡುವುದಕ್ಕೆ ಬೀಜ ಬೇಕೆಂದು ನಾವು ಕೇಳಿದೆವು. ಇದಕ್ಕೆ 3.52 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಉಳಿದ ಹಣವನ್ನು ಕೊಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಇವತ್ತು ಹೇಳಿದ್ದಾರೆ. ಬೀಜ ಕೊರತೆ ಇರತಕ್ಕಂಥದರ ಬಗ್ಗೆ ರೈತರು ರೈತ ಸಂಪರ್ಕ ಕೇಂದ್ರಗಳ ಮೇಲೆ ಸಾಕಷ್ಟು ಒತ್ತಡ ತರುತ್ತಿದ್ದಾರೆ ಎನ್ನತಕ್ಕಂಥದ್ದನ್ನು ಈಗಾಗಲೇ ಸಭೆಯ ಗಮನಕ್ಕೆ ತಂದಿದ್ದೇವೆ. ಇದರ ಜೊತೆಗೆ ಗೊಬ್ಬರ ವಿಷಯವನ್ನೂ ಕೂಡ ಮಾತನಾಡಿದ್ದೇವೆ. ಮಾನ್ಯ ಶ್ರೀನಿವಾಸಗೌಡರು ಗಮನ ಸೆಳೆದಿರುವ ವಿಷಯದ ಬಗ್ಗೆ ನಾವಿಬ್ಬರೂ ಕೂಡ ಮಾತನಾಡಿದ್ದೇವೆ. ಒಟ್ಟಾರೆ ಮಾನ್ಯ ಮುಖ್ಯಮಂತ್ರಿಯವರು

ಕೊಟ್ಟಿರತಕ್ಕಂಥ ಮಾತಿನ ಪ್ರಕಾರ 20 ಸಾವಿರ ಟನ್ ಬಗ್ಗೆ ಮಾತ್ರ ಹೇಳಿದ್ದಾರೆ. ಆದರೆ, ಕೇವಲ ರಾಯಚೂರು ಜಿಲ್ಲೆಗೆ ಒಂದೇ ಒಂದು ಲಕ್ಷ ಟನ್ ಬೇಕಾಗುತ್ತದೆ. ಅಂದರೆ ನೈಟ್ರೋಜನ್ ಮತ್ತು ಡಿಎಪಿ ಹಾಗೂ ಇತರೆ ಗೊಬ್ಬರ ಒಂದು ಲಕ್ಷ ಟನ್ ಬೇಕು. ಆದರೆ, ಅವತ್ತು ಕೇವಲ 20 ಸಾವಿರ ಟನ್ ಗಷ್ಟೇ ಮಾತನಾಡಿದ್ದು, ಈಗಾಗಲೇ ಸಾಕಷ್ಟು ಶಾರ್ಟೇಜ್ ಇರುವುದರಿಂದ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಡಿಎಪಿ ಮತ್ತು ಇತರೇ ಗೊಬ್ಬರಗಳು ಸ್ಟಾಕ್ ಇಲ್ಲದೆ ಇರುವುದರಿಂದ ಮಾರ್ಕೆಟ್‌ಗಳಿಗೆ ಜನರು ತಿರುಗುತ್ತಿದ್ದಾರೆ. ಇವತ್ತಿನದಿವಸ ಡೀಸಲ್ ಬೆಲೆ ಜಾಸ್ತಿಯಾಗಿರುವುದ ರಿಂದ ಖಾಸಗಿ ಗೊಬ್ಬರ ಕಂಪನಿಗಳು ದೂರದ ಪ್ರದೇಶಗಳಿಗೆ ಗೊಬ್ಬರಗಳನ್ನು ಸರಬರಾಜು ಮಾಡದೆ ಕಂಪನಿ ಸುತ್ತಮುತ್ತಲು ಇರತಕ್ಕಂಥ ಕೃಷಿ ಪ್ರದೇಶಗಳಿಗೆ ಮಾತ್ರ ದಾಸ್ತಾನು ಇಡತಕ್ಕಂಥ ಕೆಲಸವನ್ನು ಇವತ್ತಿನ ದಿವಸ ಖಾಸಗಿ ಕಂಪನಿಯವರು ಮಾಡುತ್ತಿದ್ದಾರೆ. ಆದ್ದರಿಂದ ಕಂಪನಿಯಿಂದ ದೂರ ಇರತಕ್ಕಂಥ ಪ್ರದೇಶಗಳಿಗೆ ಸರಬರಾಜು ಮಾಡುತ್ತಿಲ್ಲ. ಆದ್ದರಿಂದ ಇಲಾಖೆಯವರು ನೇರವಾಗಿ ಸಂಬಂಧಪಟ್ಟಂಥ ಕಂಪನಿಯವರನ್ನು ಕರೆದು ಕೇಂದ್ರ ಸರ್ಕಾರ ಅವರಿಗೆ ಪ್ರತಿವರ್ಷ ಅಲಾಟ್ ಮಾಡಿರತಕ್ಕಂಥಷ್ಟು ವರ್ಷೇ ವರ್ಷೇ ಸರಿಯಾದ ರೀತಿಯಲ್ಲಿ ಸ್ಟಾಕ್ ಕೊಡತಕ್ಕಂಥ ಕೆಲಸ ಮಾಡಬೇಕೆಂದು ಹೇಳಬೇಕು. ಆದರೆ, ಇವತ್ತಿನ ದಿವಸ ರೈತರಿಗೆ ಸಾಕಷ್ಟು ತೊಂದರೆಯಾಗಿರತಕ್ಕಂಥದ್ದನ್ನು ನಾವು ಮಾರುಕಟ್ಟೆಯಲ್ಲಿ ನಾವೆಲ್ಲರು ನೋಡಿದ್ದೇವೆ. ಕಳೆದ ಸಾರಿ ಮಾನ್ಯ ಶ್ರೀನಿವಾಸಗೌಡರು ಕೃಷಿ ಸಚಿವರಾಗಿದ್ದಂಥ ಸಂದರ್ಭದಲ್ಲಿ ನಾವು ಅವರಲ್ಲಿ ವಿನಂತಿ ಮಾಡಿಕೊಂಡು ಪ್ರತಿವಾರ ಸಾಕಷ್ಟು ರ್ಯಾಕ್ಸ್ ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಿಗೆ ಕಳುಹಿಸತಕ್ಕಂಥ ಪ್ರಯತ್ನ ಮಾಡಿದ್ದೇವೆ. ಈಗಾಗಲೇ ನಾನು ಹೇಳಿದ ಹಾಗೆ ಗುಲ್ಬರ್ಗ ಮತ್ತು ರಾಯಚೂರು ಭಾಗದಲ್ಲಿ ಕೊರತೆ ಇರತಕ್ಕಂಥದ್ದನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಆದ್ದರಿಂದ ತಕ್ಷಣ ಡಿಎಪಿ ಯನ್ನು ತಕ್ಷಣ ಕಳುಹಿಸುವಂಥ ಪ್ರಯತ್ನವನ್ನು ತಾವು ಮಾಡಬೇಕು. ತಾವು ಎಲ್ಲಾ ಸೇರಿ 20 ಸಾವಿರ ಟನ್ ಲೆಕ್ಕ ಹಾಕಿದ್ದೀರಿ. ಇದಕ್ಕೆ ಇಟ್ಟಿರತಕ್ಕಂಥ 25 ಕೋಟಿ ರೂಪಾಯಿಗಳಲ್ಲಿ ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ. ಈ ಹಣದಲ್ಲಿ ಸುಮಾರು 2.5 ಸಾವಿರ ಟನ್ ಮಾತ್ರ ಬರುತ್ತದೆ. ಆದರೆ ನೀವು ಮಾತನಾಡಿರುವುದು 21.5 ಸಾವಿರ ಟನ್. ಅಂದರೆ 7.5. ಸಾವಿರ ಟನ್ ಡಿಎಪಿ, 8 ಸಾವಿರ ಟನ್ ಯೂರಿಯಾ 6 ಸಾವಿರ ಟನ್ 20–20 ಇವೆಲ್ಲಾ ಸೇರಿದರೂ ಕೂಡ 25 ಕೋಟಿ ರೂಪಾಯಿಗೆ ಕೇವಲ 2.5 ಸಾವಿರ ಟನ್ ಮಾತ್ರ ಬರುತ್ತದೆ. ಆದರೆ ಈಗ ಅಲ್ಲಿಗೆ 1 ಲಕ್ಷ ಟನ್‌ನಷ್ಟು ಅವಶ್ಯಕತೆ ಇದೆ. ಆದ್ದರಿಂದ ಇಲ್ಲಿ ಆಗಿರತಕ್ಕಂಥ ವ್ಯತ್ಯಾಸಗಳನ್ನು ತಾವು ಸಂಬಂಧಪಟ್ಟಂಥ ಅಧಿಕಾರಿಗಳಿಂದ ಮಾಹಿತಿ ತರಿಸಿಕೊಂಡು ತಾವು ಇದನ್ನು ಸರಿಪಡಿಸದಿದ್ದರೆ ಕಷ್ಟವಾಗುತ್ತದೆ. ಈಗ ಮಳೆ ಕೂಡ ಬಂದಿದೆ ಮತ್ತೆ ಕೆನಾಲ್‌ಗಳಿಂದ ನೀರು ಬಿಡತಕ್ಕಂಥ ಪರಿಸ್ಥಿತಿ ಕೂಡ ಇದೆ. ಅಂದರೆ ನಾರಾಯಣಪುರ ಡ್ಯಾಂನಿಂದ ಮತ್ತು ತುಂಗಭದ್ರ ರೈಟ್ ಮತ್ತು ಲೆಫ್ಟ್ ಬ್ಯಾಂಕ್ ಕೆನಾಲ್‌ನಿಂದ ನೀರು ಬಿಡಲಾಗುತ್ತದೆ. ನೀರು ಬಿಟ್ಟ ತಕ್ಷಣವೇ ಏಕ್‌ದಂ ಶೂಟ್ ಆಫ್

ಪ್ರಾರಂಭವಾಗುತ್ತದೆ. ಆದ್ದರಿಂದ ತಾವು ತಕ್ಷಣ ಕ್ರಮ ತೆಗೆದುಕೊಂಡು ಆ ಪ್ರದೇಶಗಳಿಗೆ ಡಿಎಪಿ ಮತ್ತು ಯೂರಿಯಾ ಗೊಬ್ಬರವನ್ನು ಮೂವ್ ಮಾಡತಕ್ಕಂಥ ಪ್ರಯತ್ನ ಮಾಡಬೇಕೆಂದು ಮಾನ್ಯ ಉಪಾಧ್ಯಕ್ಷರ ಮೂಖಾಂತರ ತಮಗೆ ಒತ್ತಾಯ ಮಾಡುತ್ತೇನೆ.

ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಉಪಾಧ್ಯಕ್ಷರೆ, ಕಳೆದ ಸಾರಿ ನಮ್ಮ ನಾಯಕರು ಬೀಜದ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದರು. ಹಾಗೆಯೇ ಇದರ ಬಗ್ಗೆ ಎಲ್ಲಾ ಸದಸ್ಯರೂ ಕೂಡ ಸಾಕಷ್ಟು ಪ್ರಸ್ತಾಪ ಮಾಡಿದ್ದರು. ಅದಕ್ಕೆ ಸರ್ಕಾರದಿಂದ ಯಾವುದೇ ಉತ್ತರ ಬರಲಿಲ್ಲ. ಮತ್ತೆ ಬೀಜ ಕೂಡ ವಿತರಣೆ ಆಗುತ್ತಿಲ್ಲ. ಮೊನ್ನೆ ಶನಿವಾರದ ದಿವಸ ಸಾಗುವಳಿ ಚೀಟಿ ಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ನಾವು ಇಟ್ಟುಕೊಂಡಿದ್ದೇವು. ಆವತ್ತು ಇಡೀ ರೈತರು ಶಾಸಕರಿಗೂ ಮತ್ತು ಕೃಷಿ ಅಧಿಕಾರಿಗಳಿಗೆ ಛೇರಾವೂ ಮಾಡಿದರು. ಆಗ ನಾನು ತಕ್ಷಣ ಮಾನ್ಯ ಸಚಿವರನ್ನು ಕಾಂಟ್ಯಾಕ್ಟ್ ಮಾಡಿದೆ. ಮಾನ್ಯ ಸಚಿವರು ಆ ಸಂದರ್ಭದಲ್ಲಿ ಅವರ ಕ್ಷೇತ್ರದ ಯಾವುದೊಂದು ಕಾರ್ಯಕ್ರಮದಲ್ಲಿದ್ದರು. ನಮ್ಮ ಅಧಿಕಾರಿಗಳಿಗೆ ಸರಿಯಾದಂಥ ಆದೇಶವನ್ನು ಕೊಡಿ ಎಂದು ಕೇಳಿದ್ದಕ್ಕೆ ತತ್‌ಕ್ಷಣ ವ್ಯವಸ್ಥೆ ಮಾಡುತ್ತೇವೆಂದು ಅವರು ಹೇಳಿದರು.

5.30 ಪಿ.ಎಂ.

ಆದರೆ ಇವತ್ತಿನವರೆಗೂ ಕೂಡ, ಬೀಜ ಇದೆ ಆದರೆ ಸಬ್ಸಿಡಿಯನ್ನು ಕೊಡದೆ ಬೀಜ ವಿತರಣೆಯಾಗುತ್ತಿಲ್ಲ. ಇವತ್ತು ರೈತರು ಬಹಳಷ್ಟು ತೊಂದರೆಗೆ ಒಳಗಾಗಿದ್ದಾರೆ ನಮ್ಮಲ್ಲಿ ಮುಂಗಾರು ಮಳೆ ಬಿಟ್ಟರೆ ಬೇರೆ ಮಳೆ ಬರುವುದಿಲ್ಲ. ಇವತ್ತು ಬಿತ್ತನೆಗೆ ಬೇಕಾಗಿರತಕ್ಕಂಥದ್ದು ಮೆಕ್ಕೆಜೋಳ, ಶೇಂಗಾ ಮತ್ತು ಸೂರ್ಯಕಾಂತಿ ಇವತ್ತು ಇಷ್ಟು ಬೀಜಗಳು ಕೂಡ ಸರಿಯಾಗಿ ಅಲ್ಲಿ ವಿತರಣೆಯಾಗುತ್ತಿಲ್ಲ. ನಮಗೆ ಈಗ ಅಲ್ಲಿ ಬೇಕಾಗಿರತಕ್ಕಂಥದ್ದು ನಮ್ಮ ಜಿಲ್ಲೆಗೆ 408 ಲಕ್ಷ ರೂ.ಗಳು ಬೇಕು. ಅದರಲ್ಲಿ ಕೇವಲ 276 ಲಕ್ಷ ರೂ.ಗಳು ಮಂಜೂರಾಗಿದೆ. ಅದರಲ್ಲಿ ನನ್ನ ಕ್ಷೇತ್ರಕ್ಕೆ ಕೇವಲ 80 ಲಕ್ಷ ರೂ.ಗಳು ಸಬ್ಸಿಡಿ ಸಿಕ್ಕಿದೆ. ಅದರಲ್ಲಿ ನಮಗೆ ಬೇಕಾಗಿರತಕ್ಕಂಥದ್ದು 120 ಲಕ್ಷ ರೂ.ಗಳು ಇನ್ನೂ ಸುಮಾರು 40 ಲಕ್ಷ ರೂ.ಗಳು ಸಬ್ಸಿಡಿ ಬೇಕಾಗಿದೆ. ಬೀಜ ಇವತ್ತು ಸ್ಟಾಕ್ ಇದ್ದರೂ ಕೂಡ ಅಲ್ಲಿ ವಿತರಣೆಯಾಗುತ್ತಿಲ್ಲ. ರೈತರಿಗೆ ಇದರಿಂದ ಬಹಳಷ್ಟು ತೊಂದರೆಯಾಗಿದೆ. ಇದಕ್ಕೆ ಸಬ್ಸಿಡಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಲು ಮಾನ್ಯ ಸಚಿವರು ಸ್ಪಂದಿಸಬೇಕೆಂದು ತಮ್ಮ ಮುಖಾಂತರ ನಾನು ಈ ಸದನದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಬೀಜದ ವಿತರಣೆಗೆ ಸಬ್ಸಿಡಿ ಕೊಡುವಂಥದ್ದು ತತ್‌ಕ್ಷಣ ಆಗಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತಿದ್ದೇನೆ.

ಡಾ : ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ..

ಉಪಾಧ್ಯಕ್ಷರೆ : ಇವತ್ತು ಏಕೋ ನಿಮಗೆ ಟೈಮ್ ಸರಿಯಾಗಿಲ್ಲ. ಹೋಗಲಿ ಬಿಡಿ. ಅವರು ಉತ್ತರವನ್ನು ಕೊಡುತ್ತಾರೆ.

ಡಾ : ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಉಪಾಧ್ಯಕ್ಷರೆ, ಬಹಳ ಪ್ರಮುಖವಾಗಿರತಕ್ಕಂಥದ್ದು ನನ್ನ ಕ್ಷೇತ್ರದಲ್ಲಿಯೇ ಏಕೆಂದರೆ ಹೋದ ಸಲ ನಾವು ಸದನದಲ್ಲಿ

ಧರಣಿ ಮಾಡುವುದಕ್ಕೆ ನಾವು ಬಂದಿದ್ದೆವು ಏಕೆಂದರೆ ನಮ್ಮ ಸೇಡಂ ತಾಲ್ಲೂಕಿನಲ್ಲಿ ಉದ್ದು ಮತ್ತು ಹೆಸರಿನ ಬಹಳ ಕೊರತೆ ಇದೆ. ಹೆಸರಿನ ಬಗ್ಗೆ ಸ್ವಲ್ಪ ಮಟ್ಟಿಗೆ ವ್ಯವಸ್ಥೆಯನ್ನು ಮಾಡಿದ್ದಾರೆ. ಆದರೆ ಉದ್ದು ಇದರ ಬಗ್ಗೆ ಈಗಲೂ ಕೊರತೆ ಇದೆ. ಈಗ ರೈತರು ಬಿತ್ತುವ ಸಲುವಾಗಿ ಉದ್ದು ಇದರ ವ್ಯವಸ್ಥೆಯನ್ನು ಮಳೆ ಬರುವುದಕ್ಕೆ ಮುಂಚೆ ಬೀಜದ ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಅದಕ್ಕೆ ಇವತ್ತು ಏನು ವ್ಯವಸ್ಥೆಯನ್ನು ಮಾಡಬೇಕಾಗಿತ್ತು ಅದನ್ನು ಮಾಡಿರುವುದಿಲ್ಲ. ಅದೂ ಅಲ್ಲದೆ ಡಿಎಪಿ ಗೊಬ್ಬರ ಇವತ್ತು ಎಷ್ಟು ಡಿಮ್ಯಾಂಡ್ ಇದೆ. ಇವತ್ತು ಅದನ್ನು ಬ್ಲಾಕ್ ಮಾರ್ಕೆಟ್‌ಗೆ ಅನುವು ಮಾಡಿಕೊಡುವ ರೀತಿಯಲ್ಲಿ ಇದೆ. ಡಿಎಪಿ ನಮ್ಮ ಕ್ಷೇತ್ರದಲ್ಲಿ ಬಹಳ ಕೊರತೆ ಇದೆ. ಅದರ ವ್ಯವಸ್ಥೆಯನ್ನು ಮಾಡುವುದಕ್ಕೆ ಏನು ಇವತ್ತು ಸಚಿವರಿಂದ ಆಗುತ್ತಿಲ್ಲ. ಮುಂಜಾಗ್ರತೆ ಇದರ ಬಗ್ಗೆ ವಹಿಸಬೇಕಾಗಿತ್ತು. ಈಗ ನೀವು ಮಾಡಿದರೂ ಕೂಡ ಉದ್ದಿನ ಬೀಜದ ಬಗ್ಗೆ ಇನ್ನೂ ಏನೂ ಆಗಿಲ್ಲ. ಇನ್ನು ಡಿಎಪಿ ಬಗ್ಗೆ ಯಾವ ರೀತಿ? ಮಾಡುತ್ತೀರಿ? ಇನ್ನು ಮುಂದೆ ಈ ರೀತಿಯಾಗದಂತೆ ನೋಡಿಕೊಳ್ಳಬೇಕು.

ಶ್ರೀ ಹೆಚ್. ನಿಂಗಪ್ಪ (ಕುಣಿಗಲ್) : ಮಾನ್ಯ ಉಪಾಧ್ಯಕ್ಷರೆ, ತುಮಕೂರು ಜಿಲ್ಲೆಯಲ್ಲಿ ಐಆರ್-64 ಭತ್ತದ ಕೊರತೆಯಾಗಿ ರೈತರು ಇವತ್ತು ಬೀಜವನ್ನು ಕೊಳ್ಳುವುದಕ್ಕೆ ರೈತರು ಬಹಳಷ್ಟು ಪರದಾಡುತ್ತಿದ್ದಾರೆ. ಇವತ್ತು ಕುಣಿಗಲ್‌ದಲ್ಲಿ ರೈತರ ಸಾಕಷ್ಟು ಗಲಾಟೆಯಾಗಿದೆ. ಆದ್ದರಿಂದ ಅದರ ಬಗ್ಗೆ ಮಾನ್ಯ ಸಚಿವರು ಗಮನವನ್ನು ಹರಿಸಿ ಅದಷ್ಟು ಬೇಗ ಈ ಬಿತ್ತನೆ ಬೀಜವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಂಡೆಪ್ಪ ಕಾಂಶಪೂರ್ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನನ್ನ ಸ್ನೇಹಿತರು ಹಾಗೂ ಮಾಜಿ ಕೃಷಿ ಸಚಿವರು ಗಮನ ಸೆಳೆಯುವ ಸೂಚನೆಗೆ ಮೊದಲು ಉತ್ತರಿಸುತ್ತೇನೆ. ಈಗ ಅವರು ಹೇಳಿದರು. ಈ ವರ್ಷ ಯಾವ ರೀತಿಯಿಂದಲೂ ಗೊಬ್ಬರದ ಕೊರತೆ ಎಲ್ಲೂ ಇಲ್ಲ ಏಕೆಂದರೆ ಅದನ್ನು ಅವರೆ ಸಪ್ಲೈ ಮಾಡುತ್ತಿದ್ದಾರೆ. ಮಾನ್ಯ ಪ್ರಕಾಶ್ ಪಾಟೀಲ್‌ರವರು ಹೇಳಿದಂತೆ ಗುಲ್ಬರ್ಗಾಕ್ಕೆ ನಾನು ಆವತ್ತು ಫೋನ್‌ನ್ನು ಮಾಡಿದ್ದೆ. ಮೂರನೆ ದಿವಸ ಅಲ್ಲಿಗೆ ಒಂದು ರ‍್ಯಾಕ್ ಬಂದಿದೆ. ಡಿಎಪಿ ಹಾಗೂ ಯೂರಿಯೂ ಬಂದಿದೆ. ಹಾಗಾಗಿ ಇಡೀ ರಾಜ್ಯದಲ್ಲಿ ಆಯಾ ರಾಜ್ಯಗಳಿಗೆ ಬೇಕಾದಂಥ ಯೂರಿಯಾ ಅಥವಾ ಡಿಎಪಿ ಆಗಲಿ ಅಲ್ಲಿರುವ ಫೆಡರೇಷನ್‌ದವರಿಗೆ ನಾವು ಪ್ಲಾನ್‌ನ್ನು ಕೊಟ್ಟು ಬಿಟ್ಟಿದ್ದೇವೆ. ಅದರ ಪ್ರಕಾರ ಅವರು ಅಲ್ಲಿರುವ ದಾಸ್ತಾನುಗಳಿಗೆ ಮುಟ್ಟಿಸುತ್ತಿದ್ದಾರೆ. ಎರಡು-ಮೂರು ರ‍್ಯಾಕ್ ಬರುವುದರಲ್ಲಿ ತೊಂದರೆಯಾಗುತ್ತದೆ ವಿನಹಃ ತಮಗೆ ನಾನು ಹೇಳಬೇಕಾದರೆ 17.84 ಲಕ್ಷ ಟನ್ ನಾವು ಈ ವರ್ಷದ ಗುರಿಯನ್ನು ಇಟ್ಟು ಕೊಂಡಿದ್ದೆವು. ಮೊನ್ನೆ ಜೂನ್ 15 ರವರೆಗಿನ ರೆಕಾರ್ಡ್ಸ್ ನನಗೆ ಬಂದಿದೆ. ಅದರಲ್ಲಿ 4.27 ಲಕ್ಷ ಟನ್ ನಾವು ಸಪ್ಲೈ ಮಾಡಿದ್ದೇವೆ. ಅದರಲ್ಲಿ ಇನ್ನೂ ಎಲ್ಲಾ ಕಡೆ ಸ್ಟಾಕ್ ಇರುವುದು 2.26 ಲಕ್ಷ ಟನ್ ಇದೇ 29ನೇ ತಾರೀಖು ಎಲ್ಲಾ ಸಪ್ಲೈಯರ್ಸ್‌ಗಳ ಮೀಟಿಂಗ್ ನ್ನು ಕರೆದಿದ್ದೇವೆ. ಎಲ್ಲಾ ಭಾಗದಲ್ಲಿಯಾವುದೇ ರೀತಿಯಿಂದ ಗೊಬ್ಬರ ಕಡಿಮೆ ಬೀಳದಂತೆ ನೋಡಿಕೊಳ್ಳುವ ಜವಾಬ್ದಾರಿ

ಫೆಡರೇಶನ್ ಹಾಗೂ ಸರ್ಕಾರದ್ದು; ಆದರೆ ಅವರು ದುಡ್ಡಿನ ಬಗ್ಗೆ ಹೇಳಿದರು. ಮಾನ್ಯ ಉಪ ಮುಖ್ಯಮಂತ್ರಿಗಳು ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇದೊಂದು ಹೊಸ ಸ್ಕೀಂ ಆಗಿರುವುದರಿಂದ ಮಿಟಿಂಗ್ ಮತ್ತು ಇತರೆಯಿಂದ ಸ್ವಲ್ಪ ಲೇಟಾಗಿದೆ. ನನ್ನ ಪರವಾಗಿ ನಾನು ಒತ್ತಡವನ್ನು ಮಾಡಿ ತಾವು ಹೇಳಿದಂತೆ ಬಹಳ ಶೀಘ್ರದಲ್ಲಿಯೇ ಆ ದುಡ್ಡು ರೀಲಿಸ್ ಮಾಡುವಂಥ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಗೌಡ : ಮಾನ್ಯ ಉಪಾಧ್ಯಕ್ಷರೆ, ಒಳ್ಳೆಯ ನಿಮ್ಮ ಕಾರ್ಯದರ್ಶಿಗಳಿದ್ದಾರೆ. ನೀವು ನಿಮ್ಮ ಕಾರ್ಯದರ್ಶಿಯವರಿಗೆ ಹೇಳಿ ಆರ್ಡರ್ ಇಷ್ಯೂ ಮಾಡಿಸಬೇಕು. ಡೆವಲಪ್‌ಮೆಂಟ್ ಕಮಿಷನರಿಗೆ ಹೇಳಿ ಆರ್ಡರ್‌ನ್ನು ಇಸ್ಯೂ ಏನು ಅಗತ್ಯ ಇದೆ? ಇವೆಲ್ಲಾ ನಾನು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಅವರು ಏನೂ ಬೃಹಷ್ಪತಿಗಳೂ ಏನಲ್ಲ. ಸಂಬಂಧಪಟ್ಟ ಕಾರ್ಯದರ್ಶಿಗಳು ಇದ್ದಾರೆ ಅವರಿಗೆ ನೀವು ಸೂಚನೆಯನ್ನು ಕೊಟ್ಟರೆ ಆರ್ಡರ್‌ನ್ನು ಇಷ್ಯೂ ಮಾಡಿಸಿ ಹಣವನ್ನು ರಿಲೀಸ್ ಮಾಡಿಸಬಹುದು. ಗೊಬ್ಬರ ತೆಗೆದುಕೊಳ್ಳುವವರು ರೈತರು, ದುಡ್ಡು ಕೊಡುವುದಕ್ಕೆ ಫೈಲ್‌ನ್ನು ಬರೀ ಓಡಾಡಿಸಿಕೊಂಡು 4 ತಿಂಗಳಾದರೆ ಇದು ಹೇಗೆ? ನಾನು ಕೇಳಿರುವ ಗಮನ ಸೆಳೆಯುವ ಸೂಚನೆ ಏನೆಂದರೆ ನೀವು ಯಾವತ್ತು ಹಣವನ್ನು ಬಿಡುಗಡೆ ಮಾಡುತ್ತೀರಿ? ಅದನ್ನು ತಾವು ಹೇಳಬೇಕು. ಈಗಲೇ ನಿಮ್ಮ ಅಧಿಕಾರಿಗಳನ್ನು ಕೇಳಿ ಹೇಳಬಹುದು.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಮಾನ್ಯ ಉಪಾಧ್ಯಕ್ಷರೆ, ನಿಜವಾಗಿ ಹೇಳಬೇಕೆಂದರೆ, ಗೊಬ್ಬರ ಇಲ್ಲ. ಬೀಜ ಎಲ್ಲಿಯೂ ಸರಿಯಾಗಿಲ್ಲ. ಇದು ಬಹಳ ಗಂಭಿರವಾದ ಪರಿಸ್ಥಿತಿ ಇದೆ. ನಾವು ನೀವು ಒಕ್ಕಲಿಗರು. ಎಲ್ಲರೂ ಮಾತನಾಡಬೇಕಾಗುತ್ತದೆ, ಅವರು ಹಿಂದೆ ಮಂತ್ರಿಯಾಗಿದ್ದವರು ಈಗ ನೀವು ಮಂತ್ರಿಯಾಗಿದ್ದೀರಿ. ರಾಜ್ಯದಲ್ಲಿ ಈ ವರ್ಷ ಸುದೈವದಿಂದ ಒಳ್ಳೆಯ ಮಳೆಯಾಗಿದೆ. ಬರಗಾಲ ಇರುವ ನಮ್ಮಲ್ಲಿ ಬಿತ್ತನೆ ಶುರುವಾಗಿವೆ. ಬೀಜ ಇಲ್ಲ ಗೊಬ್ಬರ ಇಲ್ಲ ಹೇಗೆ ಮಾಡುವುದು? ಈಗ ಪರಿಸ್ಥಿತಿ ಏನಾಗಿದೆ ಎಂದರೆ ಆಗಲೇ ನಾವು ವಾಕ್‌ಔಟ್ ಮಾಡಿರುವುದರಿಂದ ಈಗ ನಾವು ಸುಮ್ಮನೆ ಕುಳಿತಿದ್ದೇವೆ ಅಷ್ಟೆ. ಹಗಲೆಲ್ಲಾ ವಾಕ್‌ಔಟ್ ಮಾಡಿದರೆ ಸರಿಯಲ್ಲವೆಂದು ಕುಳಿತಿರುತ್ತೇವೆ. ನಿಜವಾಗಿಯೂ ಹೇಳಬೇಕೆಂದರೆ, ನೀವು ಉತ್ತರ ಕೊಡುತ್ತೇವೆಂದು ಹೇಳುತ್ತಿದ್ದೀರಿ ಈಗ. ಈಗ ನಮ್ಮಲ್ಲಿ ಬಿತ್ತುವುದು ಮುಗಿದು ಹೋದವು. ಮುಂಗಾರಿಯನ್ನು ಗೊಬ್ಬರವಿಲ್ಲದೆ ರೈತರು ಬಿತ್ತನೆ ಮಾಡಿದ್ದಾರೆ. ಯಾವ್ಯಾವುದೋ ಬೀಜವನ್ನು ತೆಗೆದುಕೊಂಡು ಹಾಕಿದ್ದಾರೆ. ಆರಿದ್ರ ಮುಳೆಗೆ ಮುಂಗಾರಿ ಬಿತ್ತುವುದು ಮುಗಿದು ಹೋಗಿವೆ. ಇದು ಪರಿಸ್ಥಿತಿ ನಮಗೆ ಇರುವುದು. ಆ ಕಾರಣದಿಂದ ಮೇಲು ಗೊಬ್ಬರವೆಂದು ಹಾಕುತ್ತಾರೆ. ದಯವಿಟ್ಟು ಕೂಡಲೇ ಹಣವನ್ನು ಬಿಡುಗಡೆ ಮಾಡಬೇಕು. ನಮ್ಮಲ್ಲಿ ಬಿತ್ತನೆಯಾಗಿರುವುದರಿಂದ ಇನ್ನು ಏನು ನಾವು ಮಾಡುವುದು?

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಡಿಎಪಿಯ ವ್ಯವಸ್ಥೆ ಇನ್ನೂ ಆಗಿಲ್ಲ. ಉದ್ದಿನ ಬೀಜದ ವ್ಯವಸ್ಥೆ ಇನ್ನೂ ಆಗಿಲ್ಲ. ದಿನಾಲು 3-4 ಕ್ವಿಂಟಾಲ್ ಕಳುಹಿಸುತ್ತಿದ್ದಾರೆ. ರೈತರಲ್ಲಿ ಇವತ್ತು

ಜಗಳವಾಗುತ್ತಿದೆ. ರೈತ ಕೇಂದ್ರದಿಂದ ತೆಗೆದುಕೊಂಡು ಹೋಗುತ್ತಾರೆ. ಮತ್ತೆ ಬೆಳಗ್ಗೆಯಾದ ತಕ್ಷಣ ಇರುವುದಿಲ್ಲ. ಎಲ್ಲಾ ರೈತರಿಗೂ ಸಿಗುತ್ತಿಲ್ಲ. ದಿನಾಲು 3–4 ಕ್ವಿಂಟಾಲ್‌ನ್ನು ರೈತ ಸಂಪರ್ಕ ಕೇಂದ್ರಕ್ಕೆ ಕಳುಹಿಸುತ್ತಿದ್ದಾರೆ. ಮುಂಜೆ ಉದ್ದಿನ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಡಿಎಪಿ ಇವತ್ತಿನವರೆಗೂ ಇಲ್ಲ ನೀವು ಬೇಕಾದರೆ ಫೋನ್ ಮಾಡಿ ಕೇಳಬಹುದು. ಮಂತ್ರಿಗಳಿಗೆ ಇವತ್ತು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ನೀವು ಕರೆಕ್ಟಾಗಿ ಕೇಳಿ ತಿಳಿದುಕೊಳ್ಳಬಹುದು.

ಶ್ರೀ ಬಂಡೆಪ್ಪ ಖಾಶೆಂಪೂರ್ : ಇವತ್ತು ನಾನು ಫೋನ್ ಮಾಡಿ ತಿಳಿದು ಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಒಂದು ನಿಮಿಷ. ಡಿಎಪಿ ಫಾಸ್ಯಾಸಿಡ್‌ಗಳನ್ನು ತಾವು ಬೇರೆ ದೇಶಗಳಿಂದ ಇಂಪೋರ್ಟ್ ಮಾಡಿಕೊಳ್ಳಬೇಕು. ಅಲ್ಲಿ ರೇಟ್‌ಗಳನ್ನು ಜಾಸ್ತಿ ಮಾಡಿಸಿದ್ದಾರೆ. ಕೇಂದ್ರ ಸರ್ಕಾರದವರು ಅದಕ್ಕೆ ಮನ್ನಣೆಯನ್ನು ಕೊಡುತ್ತಿಲ್ಲ. ಇಫ್ಕೋ ಸಂಸ್ಥೆಗಳಲ್ಲಿ ಮಾತ್ರ ಯಾವ ರೇಟಿಗೆ ಅದು ಸಿಗುತ್ತದೆ ಆ ರೇಟ್‌ಗೆ ಮಾರುವಂಥ ಕೆಲಸವನ್ನು ಮಾಡಿದ್ದಾರೆ.ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಪತ್ರವನ್ನು ಫರ್ಟಿಲೈಜರ್ಸ್ ಮಿನಿಷ್ಟರ್‌ಗೆ ಬರೆಸಬೇಕು. ಇವತ್ತು ಫಾಸ್ಯಾಸಿಡ್‌ಗೆ ಸಂಬಂಧಪಟ್ಟಂತೆ ಫೈಲ್‌ಗೆ ಸಚಿವರು ಸಹಿ ಹಾಕದೆ ಹಾಗೆ ಇಟ್ಟುಕೊಂಡು ಕುಳಿತಿದ್ದಾರೆ. ಇವೆಲ್ಲಾ ಕೆಲವು ವಾಸ್ತವಾಂಶಗಳನ್ನು ಹೇಳುವುದಕ್ಕೆ ಇವತ್ತು ನಾವು ಇಚ್ಛೆಪಡುವುದಿಲ್ಲ. ಡಿಎಪಿ ಸ್ವಲ್ಪ ಪ್ರಾಬ್ಲಮ್ ಇದೆ ಫಾಸ್ಯಾಸಿಡ್ ಸಿಗುತ್ತಿಲ್ಲ. ಹಾಗಾಗಿ ಉತ್ಪತ್ತಿಯಾಗುತ್ತಿಲ್ಲ. ಬಹಳಷ್ಟು ಕಡಿಮೆಯಾಗುತ್ತಿದೆ. ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು ಪತ್ರವನ್ನು ಬರೆಸಬೇಕು. ಡಿಎಪಿ ನಮಗೆ ಬಹಳ ಕಡಿಮೆ ಬರುತ್ತಿದೆ. ಇದನ್ನು ಬೇಗನೆ ಫಾಶ್ಯಾಸಿಡ್‌ಗೆ ರೇಟ್‌ನ್ನು ಫಿಕ್ಸ್ ಮಾಡಿ ಸಂಬಂಧಪಟ್ಟ ಎಲ್ಲಾ ಫ್ಯಾಕ್ಟರಿಗಳಿಗೂ ಕೂಡ ಈ ಆರ್ಡರ್‌ನ್ನು ಇಷ್ಯೂ ಮಾಡಬೇಕೆಂದು ಆದರೆ ಅದು ಆಗುತ್ತದೆ. ಇಲ್ಲದಿದ್ದರೆ ಇದೇ ತರಹ ಮುಂದುವರಿಯುತ್ತದೆ ನಾನು ಅನೇಕ ವರ್ಷಗಳ ಕಾಲ ಆ ಸಂಸ್ಥೆಯಲ್ಲಿ ಕೆಲಸ ಮಾಡಿರುವುದರಿಂದ ನಮ್ಮ ರಾಜ್ಯಕ್ಕೆ ಸಿಗುತ್ತಿದೆ. ಅದೇ ಪಕ್ಕದ ಆಂಧ್ರಪ್ರದೇಶದವರು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಬಿಹಾರ, ಆಂಧ್ರಪ್ರದೇಶ ನಮ್ಮ ರಾಜ್ಯದ ರೈತರು ಇರಬಹುದು, ರೈತರು ರೈತರೇ. ಅವರಿಗೆಲ್ಲಾ ಗೊಬ್ಬರ ಸಿಕ್ಕಬೇಕು. ಅದನ್ನು ಮಾನ್ಯ ಮುಖ್ಯಮಂತ್ರಿಗಳಿಂದ ಸಾಧ್ಯವಾದರೆ ನಾಳೆಯ ದಿವಸವೇ ಕುಳಿತು ಒಂದು ಪತ್ರವನ್ನು ಬರೆಯಿಸಬೇಕು. ಅದರಿಂದ ಇಡೀ ದೇಶಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಮಾನ್ಯ ಉಪಾಧ್ಯಕ್ಷರೆ, ಈ ಆವರ್ತನಿಧಿಯ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಇಮ್ಮಿಡಿಯೇಟ್ ಆಗಿ ಮಾತನಾಡಿ ಶೀಘ್ರವಾಗಿ ಬಿಡುಗಡೆಯಾಗುವಂಥ ಪ್ರಯತ್ನವನ್ನು ನಾವು ಮಾಡುತ್ತೇನೆ. ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನೂ ಕೂಡ ಕೊಟ್ಟಿದ್ದಾರೆ. ನಾಳೆಯ ದಿವಸ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಆ ಒಂದು ಲೆಟರ್‌ನ್ನು ಸೆಂಟ್ರಲ್ ಗೌರ್ನಮೆಂಟ್‌ಗೆ ಬರೆಯಿಸಿ ಇಡೀ ರಾಜ್ಯದ ರೈತರಿಗೆ ಅನುಕೂಲವಾಗುವಂತೆ ಮಾಡಿಸಿ ಕೊಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ನಿಲುವಳಿ ಸೂಚನೆ ಮೇಲೆ ಖರ್ಗೆಯವರು, ದೇಶಪಾಂಡೆಯವರು, ಶಿವಕುಮಾರ್‌ರವರು ಮಾತನಾಡಿದರು. ಆಗಿನ ಸಂದರ್ಭದಲ್ಲಿ ಮಾನ್ಯ ಪ್ರಕಾಶ್‌ರವರು ಹೇಳಿದರು. ಸಂಬಂಧಪಟ್ಟವರ ಜೊತೆಯಲ್ಲಿ ಮಾತನಾಡಿ ಮಾಡಿಕೊಡುತ್ತೇನೆಂದು ಹೇಳಿದರು. ನೀವು ಆಗಲೂ ಕೂಡ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಭಾಗವಹಿಸಿದ್ದೀರಿ. ಇದಕ್ಕೂ ಮುಂಚೆ ಆರು ದಿವಸಗಳ ಹಿಂದೆ ಗಮನಸೆಳೆಯುವ ಸೂಚನೆಯನ್ನು ಇದೇ ಸಂದರ್ಭದಲ್ಲಿ ಕೊಟ್ಟಿದ್ದಾರೆ ಹಾಗೂ ಮಾತನಾಡಿದ್ದಾರೆ. ಬೀದರ್, ರಾಯಚೂರು ಮತ್ತು ಗುಲ್ಬರ್ಗಾದಲ್ಲಿ ಏನಾಗಿದೆ ಎಂಬುದು ತಮಗೆ ಗೊತ್ತಿರಬಹುದು. ಅಲ್ಲಿ ಉದ್ದು ಬೆಳೆಯುತ್ತಿದ್ದಾರೆ. ನಾನು ಅಲ್ಲಿ ನಿಮ್ಮ ಜಾಯಿಂಟ್ ಡೈರೆಕ್ಟರ್‌ರವರ ಜೊತೆ ಮಾತನಾಡಿದ್ದೇನೆ. 3000 ಕ್ವಿಂಟಾಲ್ ನಷ್ಟು ಉದ್ದು ಬೇಕಾಗಿದೆ ಅಲ್ಲಿಗೆ ಅವರು ಇಲ್ಲಿಯವರೆವಿಗೂ ಹೋಗಿಲ್ಲ. ಇವತ್ತು ಅದರ ಬಗ್ಗೆ ತಮಗೆ ಗೊತ್ತಿರಬಹುದು. ಇನ್ನು ಒಂದೆರಡು ದಿವಸಗಳಲ್ಲಿ ಉದ್ದು ಬಿತ್ತತಕ್ಕಂತಹ ಸೀಸನ್ ಹೋಗಿಬಿಡುತ್ತದೆ. ಇವತ್ತು ಎಲ್ಲಾ ಕಡೆಗಳಲ್ಲಿ ಬೀಜಗಳು ಹಾಗೂ ಗೊಬ್ಬರಗಳು ಇಲ್ಲ ಅದರ ವಿತರಣೆಯೂ ಸಹ ಇಲ್ಲ ಹೋದ ವರ್ಷ ಚೆನ್ನಾಗಿ ಮಳೆಯು ಬಂದ ಮೇಲೆ ಎಲ್ಲಾ ಕಡೆಗಳಿಗೆ ಆದೇಶವನ್ನು ಕೊಟ್ಟು ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಡಿವಿಜನ್ ಹಾಗೂ ಡಿಸ್ಟ್ರಿಕ್ಟ್ ಲೆವೆಲ್‌ಗಳಲ್ಲಿ ಏನು ಕೊರತೆಗಳು ಇವೆ, ಅವರು ಏನು ಮಾಡಬೇಕು ಅದರ ಬಗ್ಗೆ ಮಾಡಿದ್ದೇವೆ. ಅದನ್ನು ತಾವು ಮಾಡಿಲ್ಲ.ನೀವು ಪಾಪ ಹೊಸದಾಗಿ ಬಂದಿದ್ದೀರಿ, ನಿಮಗೆ ಮಾಡಬೇಕಾದಂತಹ ಕಳಕಳಿ ಇದೆ. ಅದರ ಬಗ್ಗೆ ನಾನು ಕ್ರಿಟಿಸೈಜ್ ಮಾಡುತ್ತಿಲ್ಲ. ಏಕೆಂದರೆ ನಿಮ್ಮ ಬಗ್ಗೆ ನಮಗೆ ಮೊದಲಿನಿಂದಲೂ ಗೊತ್ತು. ನಾವು ಏನಾದರು ಮಾಡುತ್ತಾರೆಂದರೆ ಇದನ್ನು ತಾವು ಯಾವಾಗ ಮಾಡುತ್ತೀರಿ? ಪರಿಶೀಲನೆ ಮಾಡಿ ಮಾಡುತ್ತೇನೆಂದರೆ ಆಗುವುದಿಲ್ಲ ಸಮಯ ಹೋದ ಮೇಲೆ ಏನು ಪ್ರಯೋಜನ? ರೈತರಿಗೆ ತೊಂದರೆಯಾಗಿದೆ. ಬೀಜ ಇಲ್ಲ, ಗೊಬ್ಬರ ಇಲ್ಲ, ಅದು ಇಲ್ಲದೆ ಹೇಗೆ ಬಿತ್ತುವುದು? ಇಂತಹ ಪರಿಸ್ಥಿತಿ ಯಾವಾಗಲೂ ಕೂಡ ಆಗಿರುವುದಿಲ್ಲ. ಅದಕ್ಕಾಗಿ ತಾವು ಇಮ್ಮೀಡಿಯೇಟಾಗಿ ಇವತ್ತೇ ಎಲ್ಲಾ ಕಡೆಗಳಿಗೆ ಆದೇಶವನ್ನು ಕೊಟ್ಟು ಎಲ್ಲಿ ಬೀಜಗಳು ಇಲ್ಲ ಅದನ್ನು ಎಲ್ಲಿಂದ ತರಿಸಬೇಕು, ಒಂದೆರಡು ದಿವಸಗಳಲ್ಲಿ ಆ ಬಗ್ಗೆ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಉಪಮುಖ್ಯಮಂತ್ರಿಗಳು ಹೇಳಿಬಿಡುತ್ತಾರೆ. ಅವರು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾತನಾಡುತ್ತಾ ಹೇಳಿದರು. ನಿಮ್ಮ ಕೃಷಿಮಂತ್ರಿಗಳು ಏನು ಬೇಕಾಗಿದೆ ಅದು ಬೇಕೆಂದು ಹೇಳಬೇಕಾಗಿದೆ ಎಮದು ಹೇಳಿದರು. ಇದರಿಂದ ರೈತರಿಗೆ ತೊಂದರೆಯಾಗುವಂತಹ ಸಂದರ್ಭದಲ್ಲಿ ನಾವೆಲ್ಲರೂ ರೈತರ ಪರವಾಗಿದ್ದೇವೆ. ನಾವೆಲ್ಲರೂ ಕೂಡ ಅವರ ಸಂಕಟವನ್ನು ದೂರ ಮಾಡುತ್ತೇವೆಂದು ಹೇಳಿ ತಾವೇನು ಹೇಳುತ್ತಿದ್ದೀರಿ, ಇದು ಸತ್ಯಕ್ಕೆ ದೂರವಾದುದು, ನಿಮಗೆ ಒಳ್ಳೆಯ ಭವಿಷ್ಯವಿದೆ, ತಾವು ಮೊಟ್ಟ ಮೊದಲನೆಯದಾಗಿ ಮಂತ್ರಿಗಳಾಗಿದ್ದೀರಿ, ತಾವು ದೊಡ್ಡ ಖಾತೆಯ ಮಂತ್ರಿಗಳಾಗಿದ್ದೀರಿ, ಇದರ ಬಗ್ಗೆ ತಾವು ಹೆಚ್ಚಿನ ಶ್ರಮವನ್ನು ವಹಿಸಬೇಕಾಗುತ್ತದೆ. ಯಾವ ಯಾವ ರೀತಿಯಾಗಿ ಕೆಲಸ

ಮಾಡಬೇಕೆಂಬುದರ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡಬೇಕು. ಈ ರೀತಿಯಾಗಿ ಆದೇಶವನ್ನು ಕೊಟ್ಟರೆ ಅದು ಸರಿಹೋಗುತ್ತದೆ.

ಶ್ರೀ ಬಂಡೆಪ್ಪ ಖಾಶೆಂಪೂರ್ (ಕೃಷಿಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಹಿರಿಯರು ಹಾಗೂ ವಿರೋಧಪಕ್ಷದ ನಾಯಕರು ಮೊನ್ನೆ ಗುರುವಾರದ ದಿವಸ ಇದರ ಬಗ್ಗೆ ಬಹಳ ದೊಡ್ಡ ಚರ್ಚೆಯಾಗಿದೆ. ಆದರೆ ಆವತ್ತು ಸಾಯಂಕಾಲ ನಾನು ಎಲ್ಲಾ ಉತ್ತರವನ್ನು ತಯಾರು ಮಾಡಿಕೊಂಡು ಬಂದಿದ್ದೆ, ಆವತ್ತು ಅಡ್ಜರ್ನ್‌ಮೆಂಟಾಯಿತು. ಇವತ್ತು ನಾನು ಆ ಬಗ್ಗೆ ಪ್ರಿಪೇರ್ ಆಗಿ ಬಂದಿದ್ದೇನೆ. ಇವತ್ತು ಸಮಗ್ರವಾಗಿ ಈ ಒಂದು ಬೀಜದ ವಿಷಯದ ಬಗ್ಗೆ ಹೇಳಬೇಕಾದರೆ, ಇವತ್ತು ಇಡೀ ರಾಜ್ಯದಲ್ಲಿ ಒಟ್ಟಾರೆ 22 ಲಕ್ಷ ಹೆಕ್ಟೇರ್ ಸಣ್ಣ ಮತ್ತು ಅತಿ ಸಣ್ಣ ರೈತರು ಇದ್ದಾರೆ. ಅಲ್ಲಿ ರೈತರ ಜಮೀನು ಇದೆ. ಅದರಲ್ಲಿ ನಾವು 75 ಪರ್ಸೆಂಟ್ ನಾವು ತೆಗೆದುಕೊಂಡಿದ್ದೇವೆ. ಬೇರೆ ಕಡೆ ಯಾವುದೇ ಒಂದು ರೀತಿಯಿಂದ ಅದು ಬಿಟ್ಟುಹೋಗಿದ್ದರೂ 75 ಪರ್ಸೆಂಟ್‌ಗೆ ಟಾರ್ಗೆಟನ್ನು ಮಾಡಿಕೊಂಡರೆ 15 ರಿಮದ 16 ಲಕ್ಷ ಈ ಒಂದು ಸ್ಕೀಮ್‌ನಲ್ಲಿ ಈ ವರ್ಷ ಅಳವಡಿಸಿ ಕೊಳ್ಳುತ್ತಿದ್ದೇವೆ. ಅದೇ ನಿಟ್ಟಿನಲ್ಲಿ ಮೊನ್ನೆಯವರೆಗೆ ಬಜೆಟ್‌ನಲ್ಲಿ ಕೊಟ್ಟಿರುವುದು 42 ಕೋಟಿ ರೂಪಾಯಿಗಳು, ಆದರೆ 23ನೇ ತಾರೀಖು ನನ್ನ ಹತ್ತಿರ ಬಂದಿದೆ, ಇಡಿ ರಾಜ್ಯದಲ್ಲಿ 10–12 ದಿವಸ ಮೊದಲು ಇವತ್ತು ಮುಂಗಾರು ಸ್ಟಾರ್ಟ್ ಆಗಿದೆ ಇದರ ಬಗ್ಗೆ ತಮಗೆ ಗೊತ್ತಿದೆ. ಯಾವ ರೀತಿಯಾಗಿ ಇದು ಸ್ಟಾರ್ಟ್ ಆಗುವ ಮುಂಚೆ ಯಾವುದೇ ರೀತಿಯಿಂದ ಬೀಜ ಇಲ್ಲವೆಂದು ಸಮಸ್ಯೆಯಾಗಲಿಲ್ಲ. ಎಲ್ಲಾ ಕಡೆ ಇನ್‌ಟೈಮ್ ಬೀಜ ವಿತರಣೆ ಮಾಡುವುದು ಸ್ಟಾರ್ಟ್ ಆಗಿದೆ. ಮಾನ್ಯ ಉಪಮುಖ್ಯಮಂತ್ರಿಗಳು ಇವತ್ತು ಬಹಳ ದೊಡ್ಡ ಮನಸ್ಸು ಮಾಡಿ ಇವತ್ತು ಎಲ್ಲಾ ರೀತಿಯಿಂದಲೂ ಈ ಒಂದು ಬೀಜದ ಪರವಾಗಿ 75 ಪರ್ಸೆಂಟ್ ಸಬ್ಸಿಡಿಯನ್ನು ನಾವೇನು ಕೊಡುತ್ತಿದ್ದೇವೆ. ಇದರಲ್ಲಿ ಯಾವುದೆ ರೀತಿಯಿಂದಲೂ ಕೊರತೆಯಾಗಬಾರದೆಂದು ನಿರ್ಧಾರ ತೆಗೆದುಕೊಂಡಿದ್ದಾರೆ ಇಡೀ ರಾಜ್ಯದಲ್ಲಿ ಇದರ ಬಗ್ಗೆ ಎಲ್ಲಾ ಶಾಸಕರಿಗೂ ಗೊತ್ತು. ಆ ಜಿಲ್ಲಾ ಸಂಬಂಧಪಟ್ಟಂತಹ ಮಂತ್ರಿಗಳಿಗೂ ಸಹ ಗೊತ್ತು. ಅಲ್ಲಿ 42 ಕೋಟಿ ರೂಪಾಯಿಗಳವರೆಗೆ ಟಾರ್ಗೆಟ್‌ನ್ನು ಇಟ್ಟಿರಲಿಲ್ಲ. ಅದನ್ನು ಸ್ವಲ್ಪ ಹೆಚ್ಚು ಮಾಡಿ 64 ಕೋಟಿ ರೂಪಾಯಿಗಳವರೆಗೆ ಟಾರ್ಗೆಟ್‌ನ್ನು ಇಟ್ಟುಕೊಂಡಿದೇವು ಆ ಟಾರ್ಗೇಟ್‌ನ್ನು ಮೀರಿಹೋಗಿ ಇವತ್ತು ಮೊನ್ನೆಯ ತನಕ ಸುಮಾರು 64 ಕೋಟಿ ರೂಪಾಯಿಗಳ ಸಬ್ಸಿಡಿ ಅಮಾಂಟಾಗಿದೆ. ಅಷ್ಟರಮಟ್ಟಿಗೆ ಎಲ್ಲಾ ಜಿಲ್ಲೆಗಳಿಗೆ ವಿತರಣೆಯಾಗಿದೆ. ಇವತ್ತು ಹೆಚ್ಚು ಕಡಿಮೆ ಸುಮಾರು 11.62 ಲಕ್ಷ ರೂಪಾಯಿಗಳು ಫಾರ್ಮರ್ಸ್‌ಗೆ ಈ ಸಲ ಕೊಟ್ಟೀದ್ದೇವೆ. ಸಬ್ಸಿಡಿ 64 ಕೋಟಿ ರೂ ಮೊನ್ನೆಯವರೆವಿಗೆ ಎಲ್ಲಾ ಸವಲತ್ತುಗಳನ್ನು ರೈತರು ಪಡೆದುಕೊಂಡು ಬಂದಿದ್ದಾರೆ. ಮಾಜಿ ಸಚಿವರು ಇಲ್ಲಿಯೇ ಇದ್ದಾರೆ. ಹೋದವರ್ಷ ಇಡೀ ಸ್ಕೀಮ್‌ಗೆ 52 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ, ಇಡೀ ವರ್ಷ 28 ಕೋಟಿ ರೂಪಾಯಿಗಳಷ್ಟು ಮಾತ್ರ ಖರ್ಚಾಗಿತ್ತು. ಇಡೀ ವರ್ಷದ ಸ್ಕೀಮ್‌ನ ಹಣ ಅಲ್ಲಿ (ಇಲಾಖೆಯಲ್ಲಿ) ಉಳಿದಿತ್ತು. ಈ ವರ್ಷ ನಾವು ಬಹಳ ಮುಂಜಾಗ್ರತೆಯನ್ನು ವಹಿಸಿ ಇವತ್ತು ಮಳೆಯು ಬರುವುದಕ್ಕಿಂತಲೂ

ಮೊದಲೇ ಎಲ್ಲಾ ದಾಸ್ತಾನುಗಳನ್ನು ರೆಡಿ ಮಾಡಿದ್ದೆವು. ಇವತ್ತು ಎಲ್ಲಾ ಆರ್‌ಎಸ್‌ಕೆ ಕಡೆ ಬಹಳ ದೊಡ್ಡ ಕ್ಯೂ ಇದೆ ಎಂದು ಮಾನ್ಯ ಸದಸ್ಯರಾದ ಶ್ರೀ ಬೋಸರಾಜುರವರು ಹೇಳಿದರು. ರಾಯಚೂರಿಗೆ ಈಗ ಆಲ್‌ರೆಡಿ ನನಗನ್ನಿಸುವ ಮಟ್ಟಿಗೆ ಐದೂವರೆ ಮತ್ತು ಆರು ಕೋಟಿಯಷ್ಟು ಆ ಒಂದು ಸಬ್ಸಿಡಿ ಸ್ಕೀಮ್‌ನಲ್ಲಿ ಹೋಗಿದೆ. ಆದರೆ ಗುಲ್ಬರ್ಗಾ ಮತ್ತು ಬೀದರ್‌ಗಳಲ್ಲಿ ವಿಶೇಷವಾಗಿ ಉದ್ದು ಮತ್ತು ಹೆಸರಿಗೆ ಬಹಳ ತೊಂದರೆಯಾಗಿದೆ. ಆದರೂ ತಮಗೆ ಹೇಳಬೇಕೆಂದರೆ, ಹೋದ ವರ್ಷ ಗುಲ್ಬರ್ಗಾದಲ್ಲಿ 260 ಕ್ವಿಂಟಾಲ್ ಉದ್ದು ಕೊಟ್ಟಿದ್ದರು. ಆದರೆ ನಿನ್ನೆಯವರೆವಿಗೆ ಅದೇ ಗುಲ್ಬರ್ಗಾದಲ್ಲಿ 1250 ರಷ್ಟು ಅಲ್ಲಿ ಕೊಟ್ಟಿದ್ದೇವೆ. ಹೆಸರು ಹೋದ ವರ್ಷ 160 ಕ್ವಿಂಟಾಲ್ ನಷ್ಟು ಅಲ್ಲಿ ಕೊಟ್ಟಿದ್ದರು. ಅದೇ ಈ ವರ್ಷ ಬಹಳಷ್ಟು ಹೆಸರನ್ನು ಕೊಟ್ಟಿದ್ದೇವೆ. 13 ಕ್ರಾಪ್‌ನಲ್ಲಿ ಒಂದು ಮೂರಕ್ಕೆ ಅಷ್ಟೇ ತೊಂದರೆಯಾಗುತ್ತಿದೆ. ಉದ್ದು, ಶೇಂಗಾದ ಬೀಜ ಹಾಗೂ ಹತ್ತಿ ಡಿಸಿಹೆಚ್-32 ನಾವು ಹೊರರಾಜ್ಯಗಳಲ್ಲಿ ಅಂದರೆ ಆಂಧ್ರಪ್ರದೇಶದಲ್ಲಿ ಒಬ್ಬರು ಸ್ಪೆಷಲ್ ಆಫೀಸರ್‌ನ್ನು ಇರಿಸಿ ಬಂದಂತಹ ಉದ್ದುಗಳನ್ನು ಬೀದರ್ ಹಾಗೂ ಗುಲ್ಬರ್ಗಾಗಳಿಗೆ ನಾವು ಸಪ್ಲೈ ಮಾಡುತ್ತಿದ್ದೇವೆ. ಇನ್ನೂ ಆ ಸ್ಕೀಮ್ ನಡೆಯುತ್ತಿದೆ. ನಮ್ಮ ಶಾಸಕರು ನಿನ್ನೆ ಫೋನ್ ಸಹ ಮಾಡಿದ್ದರು. ನಾನು ಫೋನ್ ಮುಖಾಂತರ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಅಲ್ಲಿ ಕೊಟ್ಟಿರುವಂತಹ ಟಾರ್ಗೇಟ್ ಕಂಪ್ಲೀಟ್ ಸಣ್ಣ ಮತ್ತು ಅತೀ ಸಣ್ಣ ರೈತರು ಆ ಒಂದು ಮುಸುಕಿನ ಜೋಳವನ್ನು ಬೆಳೆಯಬೇಕಾದರೆ 4500 ಕ್ವಿಂಟಾಲ್ ಅಲ್ಲಿ ಬೇಕಾಗುತ್ತದೆ. ಅಲ್‌ರೆಡಿ ಅಲ್ಲಿ ಅಧಿಕಾರಿಗಳು ಆರ್ ಎಸ್‌ಕೆ ಮುಖಾಂತರ ಅಷ್ಟು ವಿತರಣೆಯಾಗಿದೆ. ಆದರೂ ಅವರು ಇನ್ನೂ ಹೆಚ್ಚಿನ ಪ್ರಮಾಣದ ಬಗ್ಗೆ ಕೇಳಿದ್ದರು. ಅವರಿಗೆ ನಾನು ಏನು ಹೇಳಿದೆ ಎಂದರೆ, ತಾವು ಒಂದು ಸ್ವಲ್ಪ ಟೈಮ್ ತೆಗೆದುಕೊಂಡು ಇದರ ಬಗ್ಗೆ ಸ್ವಲ್ಪ ಎನ್‌ಕ್ವೊರಿ ಮಾಡಿ ಏತಕ್ಕಾಗಿ ಕಡಿಮೆ ಬಿದ್ದಿದೆ ಎಂದು ನಿಟ್ಟಿನಲ್ಲಿ ತಾವೇ ಡಿಸಿಷನ್ ತೆಗೆದುಕೊಳ್ಳಿ ಎಂದು ನಾನು ಹೇಳಿದ್ದೇನೆ.

ಶ್ರೀ ಎ.ವಿ. ಉಮಾಪತಿ : ನಮ್ಮ ರಿಕ್ವರ್ ಮೆಂಟ್ 132 ಲಕ್ಷ ಆದರೆ ನಮಗೆ ಬಂದಿರತಕ್ಕಂಥದ್ದು ಕೇವಲ 80 ಲಕ್ಷ ಮಾತ್ರ ಸಬ್ಸಿಡಿ ಬಂದಿದೆ. ಇನ್ನೂ 40 ರಿಂದ 45 ಲಕ್ಷ ಸಬ್ಸಿಡಿ ಬೇಕಾಗುತ್ತದೆ.

ಶ್ರೀ ಬಂಡೆಪ್ಪ ಖಾಶೆಂಪೂರ್ : ತಾವು ಏನು ಟಾರ್ಗೇಟ್‌ನ್ನು ಕೊಡುತ್ತಿದ್ದೀರಿ.....

ಶ್ರೀ ಉಮಾಪತಿ : ಮಾನ್ಯ ಸಚಿವರೇ, ಒಂದು ನಿಮಿಷ ಒಂದೊಂದು ಸಾರಿ ಹಿರಿಯರು ಹೇಳುತ್ತಾರೆ, ಸ್ಥಳದ ಮಹಾತ್ಮೆ ಏನು ಅಂದಹಾಗೆ: ನಮ್ಮ ಉಪಮುಖ್ಯಮಂತ್ರಿಗಳು ಈ ಕಡೆ ಕುಳಿತಿದ್ದಾಗ ಬಹಳಷ್ಟು ರೈತರ ಬಗ್ಗೆ ಸಾಕಷ್ಟು ಚರ್ಚೆಯನ್ನು ಮಾಡಿದ್ದರು. ಈಗ ಆ ಕಡೆ ಆಡಳಿತ ಪಕ್ಷದ ಕಡೆಗೆ ಹೋದ ತಕ್ಷಣ ರೈತರನ್ನು ಮರೆತುಬಿಟ್ಟಿದ್ದಾರೆ. ಏಕೆಂದರೆ ಸಬ್ಸಿಡಿ ಕೊಡುವುದರ ಬಗ್ಗೆ ಹಣವನ್ನು ಮಂಜೂರು ಮಾಡುವುದರಲ್ಲಿ 408 ಲಕ್ಷಕ್ಕೆ 276 ಲಕ್ಷ ರೂಪಾಯಿಗಳಷ್ಟು ನಮ್ಮ ಇಡೀ ಜಿಲ್ಲೆಗೆ ಕೊಟ್ಟಿರುತ್ತಾರೆ. ಈಗ ನನ್ನ ಕ್ಷೇತ್ರಕ್ಕೆ ಕೇವಲ 80 ರಿಂದ 85 ಲಕ್ಷ ರೂಪಾಯಿಗಳಷ್ಟು ಬಂದಿದೆ. ನಮ್ಮಲ್ಲಿ ಪ್ರಮುಖವಾಗಿ ಬಿತ್ತನೆ ಮಾಡುವುದು ಮುಸುಕಿನ ಜೋಳ, ಶೇಂಗಾ, ಮತ್ತು

ಸೂರ್ಯಕಾಂತಿ, ಇವತ್ತು ನಾನು ದೂರವಾಣಿ ಮುಖಾಂತರ ಕಾಂಟ್ಯಾಕ್ಟ್ ಮಾಡಿದಾಗ ಆವತ್ತು ರೈತ ಸಮೂಹ ಬಂದು ನನಗೂ ಹಾಗೂ ಕೃಷಿ ಅಧಿಕಾರಿಗಳಿಗೂ ಮುತ್ತಿಗೆ ಹಾಕಿದರು. ಆಗ ನಾನು ತಕ್ಷಣ ತಮ್ಮನ್ನು ದೂರ ಸಂಪರ್ಕದಲ್ಲಿ ಕಾಂಟ್ಯಾಕ್ಟ್ ಮಾಡಿದಾಗ, ನಾನು ತಕ್ಷಣ ರಿಲೀಸ್ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಇವತ್ತು ನಾನು ಬರಬೇಕಾದಾಗ ಕೂಡ ನೋಡಿದೆ ರೈತರು ಎಲ್ಲಾ ರೈತ ಸಂಪರ್ಕ ಕೇಂದ್ರದ ಮುಂದೆ ಕ್ಯೂ ನಿಂತಿದ್ದಾರೆ. ಆದ್ದರಿಂದ ದಯಮಾಡಿ ಸಬ್ಸಿಡಿ ಕೊಡುವುದರ ಬಗ್ಗೆ ವ್ಯವಸ್ಥೆ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ವಿರೋಧಪಕ್ಷದಲ್ಲಿದ್ದಾಗ ರೈತರ ಬಗ್ಗೆ ಕಳಕಳಿ ಇದ್ದ ಯಡಿಯೂರಪ್ಪನವರಿಗೆ ಈಗೇನಾಯಿತು ಎಂಬ ಅರ್ಥ ಬರುವ ರೀತಿಯಲ್ಲಿ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ನಾನು ನಮ್ಮ ಶಾಸಕಮಿತ್ರರಲ್ಲಿ ವಿನಮ್ರವಾಗಿ ವಿನಂತಿ ಮಾಡುವುದೇನೆಂದರೆ, ತಾವು ಆಪ್ರೀಷಿಯೇಟ್ ಮಾಡಬೇಕು. ನಮ್ಮ ರೈತರ ಹಿತದೃಷ್ಟಿಯಿಂದ 75 ಪರ್ಸೆಂಟ್, ಹೆಚ್ಚಿಗೆ ಸಬ್ಸಿಡಿಯನ್ನು ಕೊಟ್ಟಿದ್ದೇವೆ. ಹೋದ ಸಾರಿ ಮಳೆ ಬರಲಿಲ್ಲ. ಬೇರೆ ಬೇರೆ ಕಾರಣಗಳಿಂದಾಗಿ 52 ಕೋಟಿ ರೂಪಾಯಿಗಳಷ್ಟು ಪ್ರಾವಿಜನ್ ಮಾಡಿದ್ದೆವು ಅದರಲ್ಲಿ ಖರ್ಚಾಗಿರುವುದು ಕೇವಲ 28 ಕೋಟಿ ರೂಪಾಯಿಗಳು. ಅದರ ಆಧಾರದ ಮೇಲೆ ನಾವು 2006–07ನೇ ಸಾಲಿಗೆ ನಾವು 42 ಕೋಟಿ ರೂಪಾಯಿಗಳಷ್ಟು ಪ್ರಾವಿಜನ್ ಮಾಡಿದ್ದೇವೆ. ಆದರೆ as on boday ಸುಮಾರು 66 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ರೂಪದಲ್ಲಿ ಖರ್ಚು ಮಾಡಿದ್ದೇವೆ. ಎಲ್ಲೆಲ್ಲಿ ಏನೇನು ಅಗತ್ಯವಿದೆ, ಹಣವು ಎಷ್ಟೇ ಖರ್ಚಾಗಲಿ ನಮ್ಮದೇನು 75 ಪರ್ಸೆಂಟ್ ಕಮಿಟ್‌ಮೆಂಟ್ ಇದೆ, ಅಷ್ಟು ನಾವು ಮಾಡುತ್ತೇವೆ. ನಾನು ಶಾಸಕರಲ್ಲಿ ಸಹಕಾರವನ್ನು ಕೇಳುತ್ತೇನೆಂದರೆ, ಸಣ್ಣ ಮತ್ತು ಅತೀ ಸಣ್ಣ ರೈತರು ಇದರ ಉಪಯೋಗ ಮಾಡಿಕೊಳ್ಳಬೇಕು. ಬಹಳ ದೊಡ್ಡ ರೈತರು ಬೇರೆ ರೀತಿಯಿಂದ ದುರುಪಯೋಗ ಮಾಡಿಕೊಳ್ಳುತ್ತಾರೆ. ನಾವು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಯಾವುದೇ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಅಗತ್ಯವಿರುವಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ. ಎಲ್ಲಿ ಅಗತ್ಯವಿದೆ ತತ್‌ಕ್ಷಣ ಹಣವನ್ನು ಬಿಡುಗಡೆ ಮಾಡಿಸುತ್ತೇವೆ. ನಮ್ಮ ಎಲ್ಲಾ ಶಾಸಕರು ಸಹಕಾರವನ್ನು ಕೊಡಬೇಕು ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಮಾತ್ರ ಇದು ಉಪಯೋಗವಾಗಬೇಕು. ಕೆಲವು ಕಡೆ ಇದರ ದುರುಪಯೋಗವಾಗುತ್ತಿದೆ. ಅದನ್ನು ತಡೆಯುವುದರ ಬಗ್ಗೆ ಸಹಕಾರವನ್ನು ಕೊಟ್ಟರೆ ನಾವು ಅಲ್ಲಿ ಕುಳಿತಾಗ ಕಮಿಟ್‌ಮೆಂಟ್ ಏನಿತ್ತು, ಈಗಲೂ ನಾವು ಅದಕ್ಕೆ ಬದ್ದರಾಗಿದ್ದೇವೆ.

ಶ್ರೀ ಎನ್.ಎಸ್. ಬೋಸರಾಜು (ಮಾನ್ವಿ) : ಉಪಾಧ್ಯಕ್ಷರೆ, ಸನ್ಮಾನ್ಯ ಉಪಮುಖ್ಯಮಂತ್ರಿಗಳು ಈಗ ಹೇಳಿದರು, ಹೋದಸಾರಿ ಸಮಯಕ್ಕೆ ಸರಿಯಾಗಿ ಮಳೆ ಬಾರದ ಕಾರಣ 52.00 ಕೋಟಿ ರೂಪಾಯಿಗಳಷ್ಟು ಮೊತ್ತ ಸಬ್ಸಿಡಿಗೆ ಇಟ್ಟಿದ್ದು ಈಗ ಇಪ್ಪತ್ತೆಂಟು ಕೋಟಿ ರೂಪಾಯಿಗಳಾಗಿವೆ. ಅದು ನಿಜವಾದಂಥಹ ಪರಿಸ್ಥಿತಿ, ಆದರೆ 2004–05 ನೇ ಸಾಲಿನ

ಮುಂಗಾರಿನಲ್ಲಿ 50% ಸಬ್ಸಿಡಿಗೆ 67.00 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದ್ದರು. ಅದನ್ನೂ ಸಹಿತ ತಾವು ಗಮನಕ್ಕೆ ತೆಗೆದುಕೊಂಡಾಗ ಇವತ್ತು 75% ಗೆ ಎಷ್ಟಾಗಬಹುದು ಎಂದು ನಾವು ಮೊದಲೇ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಬೇಕಾಗಿತ್ತು. ಮಾಡದಿದ್ದರೂ ತಾವು ಈಗಾಗಲೇ ಸರಿಯಾದ ರೀತಿಯಲ್ಲಿ ಅದಕ್ಕೆ ಎಷ್ಟು ಬೇಕೋ ಅಷ್ಟು ಹಣವನ್ನು ಅದಕ್ಕೆ ರಿಲೀಸ್ ಮಾಡುತ್ತೇವೆ ಎಂದು ತಾವು ಹೇಳಿದ್ದೀರಿ. ಹಾಗಾಗಿ ಹೋದ ವರ್ಷದ 28 ಕೋಟಿ ರೂಪಾಯಿಗಳನ್ನು ಈ ವರ್ಷಕ್ಕೆ ಗಮನಕ್ಕೆ ತೆಗೆದುಕೊಳ್ಳಲಿಕ್ಕಾಗುವುದಿಲ್ಲ. ಕಳೆದ ವರ್ಷ ಮುಂಗಾರಿನಲ್ಲಿ 67 ಕೋಟಿ ರೂಪಾಯಿಗಳನ್ನು ಕೇವಲ 50% ಸಬ್ಸಿಡಿಗೆ ಈ ಸಮ್ಮಿಶ್ರ ಸರ್ಕಾರ ರೈತರಿಗೆ ಸಬ್ಸಿಡಿ ಕೊಟ್ಟಿರತಕ್ಕಂತಿದೆ. ಹಾಗಾಗಿ ನಾವು ಕಳೆದ ಒಂದು ತಿಂಗಳಿನಿಂದ ಹೇಳುತ್ತಿದ್ದೇವೆ. ಇವತ್ತು ಸೀಡ್ಸ್ ಇದೆ. ಕೆಲವು ಕಡೆ ಸೀಡ್ಸ್ ಇಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೆ ನಾವು ಹೋದ ಸಲ ಹೇಳಿದಂತೆ ಸಂಪರ್ಕ ಕೇಂದ್ರಗಳಲ್ಲಿ ಬೀಜಗಳೂ ಸಿಗುತ್ತಿವೆ. ಸಮಯಕ್ಕೆ ಸರಿಯಾಗಿ ತಾವು ಘೋಷಣೆ ಮಾಡಿದಂತೆ ಸಬ್ಸಿಡಿ ಕೊಡದಿರುವ ಕಾರಣ ಅಲ್ಲಿ ಗೊಂದಲವಾಗುತ್ತಿದೆ. ಅದನ್ನು ನಿವಾರಣೆ ಮಾಡಿ ಎಮದು ಹೋದ ವಾರದಿಂದ ನಾವು ಹೇಳುತ್ತಿದ್ದೇವೆ. ಇವತ್ತು ರಾಯಚೂರಿನದ್ದು ಅದೇ ಪರಿಸ್ಥಿತಿಯಾಗಿದೆ. 352.00 ಲಕ್ಷ ರೂ.ಗಳನ್ನು ತಾವು ಕೊಟ್ಟಿದ್ದೀರಿ. ಅಲ್ಲಿ ಡಿಮ್ಯಾಂಡ್ ಇರತಕ್ಕಂಥದ್ದು ಏಳೂವರೆ ಕೋಟಿ ಇದರ ಬಗ್ಗೆ ಒಂದೂವರೆ ತಿಂಗಳಿಂದ ತಮ್ಮ ಅಧಿಕಾರಿಗಳ ಗಮನಕ್ಕೆ ತರಲಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಮನೆಯಲ್ಲಿ ಬಿತ್ತನೆ ಬೀಜದ ಬಗ್ಗೆ ಚರ್ಚೆಯಾಗಿ ನಮ್ಮ ಪ್ರತಿಪಕ್ಷದ ನಾಯಕರ ನೇತೃತ್ವದಲ್ಲಿ ನೀವು ವಾಕೌಟ್ ಮಾಡಿದ್ದು ಎಲ್ಲಾ ಆದ ಮೇಲೆ ಏತಕ್ಕೆ ಹೀಗಾಗುತ್ತಿದೆ ಎಂದು ನಮ್ಮ ಅಧಿಕಾರಿಗಳ ಜೊತೆ, ನಮ್ಮ ಮಂತ್ರಿಗಳೊಂದಿಗೆ ನಾವೆಲ್ಲಾ ಸಮಾಲೋಚನೆ ಮಾಡಿದೆವು. ಎಲ್ಲಿ ಸಣ್ಣ ಅತೀ ಸಣ್ಣ ರೈತರು ಇದ್ದಾರೆ, ಈಗಾಗಲೇ ನಮ್ಮ ಕೃಷಿ ಸಚಿವರು ಉತ್ತರಿಸಿರುವಂತೆ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ. ಕೇವಲ ಸಣ್ಣ ಅತೀಸಣ್ಣ ರೈತರಿಗೆ ಮಾತ್ರ ಈ ಸವಲತ್ತನ್ನು ಘೋಷಣೆ ಮಾಡಿದ್ದೇವೆ. ಅದು ಆಗುವವರೆಗೆ ತಾವು ಸಹಕರಿಸಬೇಕು. ನಾವು ಆ ಹಣವನ್ನು ಬಿಡುಗಡೆ ಮಾಡುತ್ತೇವೆ. ಎಲ್ಲಾ ಸಣ್ಣ ಅತೀ ಸಣ್ಣ ರೈತರಿಗೂ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಬಿತ್ತನೆ ಬೀಜವನ್ನು ವಿತರಣೆ ಮಾಡಲಿಕ್ಕೆ ನಮ್ಮ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ನಿಮಗೆ ಸಮಾಧಾನ ಆಗಲಿಕ್ಕೆ ಸಾಧ್ಯವೇ ಇಲ್ಲ.

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ನನಗೆ ಸಮಾಧಾನವಾಗುವುದಿಲ್ಲ. ಏಕೆಂದರೆ ನಾನು ರೈತ. ನೀವೇನು ವ್ಯವಸ್ಥೆ ಮಾಡಿದ್ದೀರಿ, ನೀವು ರೈತರು ಮುಗ್ಧರು ಎಂದು ನಿಮ್ಮ ಭಾಷಣದಲ್ಲಿ ಹೇಳುತ್ತೀರಿ, ಈ ಮುಗ್ಧತೆ ಇರುವುದಕ್ಕೆ ರೈತರಿಗೆ ಒಂದು ರೂಪಾಯಿಗೆ ನೋಂದಣಿ ಮಾಡಿಸಿದ್ದೀರಿ. ನನ್ನ ಕೋಲಾರ ಜಿಲ್ಲೆಯಲ್ಲಿ ಮೂರು ಲಕ್ಷ ಸಣ್ಣ ಹಾಗೂ ಅತೀ ಸಣ್ಣ ರೈತರಿದ್ದಾರೆ. ಅವರಲ್ಲಿ ಕೇವಲ ಐವತ್ತೊಂದು ಸಾವಿರ ಜನ ಮಾತ್ರ ನೋಂದಣಿ ಮಾಡಿದ್ದಾರೆ. ಇನ್ನುಳಿದ 2.50

ಲಕ್ಷ ಜನರು ನೋಂದಣಿ ಮಾಡಿಲ್ಲ. ಏಕೆಂದರೆ ಅವರು ಮುಗ್ಧರು. ಇವೆಲ್ಲಾ ಹೇಳ ನೀವು ಪ್ರಚಾರ ಗಿಟ್ಟಿಸಿಕೊಳ್ಳಲಿಕ್ಕೆ ಚೆನ್ನಾಗಿರುತ್ತದೆ. ಆದರೆ ವಾಸ್ತವಾಂಶವೇ ಬೇರೆ. ಎಲ್ಲೋ ಮೂರ್ನಾಲ್ಕು ಜನ ದೊಡ್ಡ ರೈತರು ಬಿತ್ತನೆ ಬೀಜವನ್ನು ತೆಗೆದುಕೊಂಡು ಬಿಡುತ್ತಾರೆ ಎನ್ನುವ ಒಂದೇ ಕಾರಣಕ್ಕೆ ಈ ನೋಂದಣಿಯನ್ನು ಮಾಡಿಸಿದ್ದೀರಿ. ಈಗ ನೋಂದಣಿ ಮಾಡಿಸಿರುವವರು ಕೇವಲ 51,000 ಜನ ರೈತರು ಮಾತ್ರ. ಉಳಿದವರ ಗತಿಯೇನು? ರೆವಿನ್ಯೂ ರೆಕಾರ್ಡ್ಸ್ ಪ್ರಕಾರ ಕೋಲಾರ ಜಿಲ್ಲೆಯಲ್ಲಿ ಮೂರು ಲಕ್ಷ ಸಣ್ಣ ಮತ್ತು ಅತೀ ಸಣ್ಣ ರೈತರಿದ್ದಾರೆ. ಅವರ ಗತಿಯೇನು? ಗುಲ್ಬರ್ಗಾದಲ್ಲಿ ಕೇವಲ 90 ಸಾವಿರ ಜನ ರೈತರು ನೋಂದಣಿ ಮಾಡಿದ್ದಾರೆ. ಆದರೆ ಅಲ್ಲಿ ಸುಮಾರು ಐದು ಲಕ್ಷ ಸಣ್ಣ ಮತ್ತು ಅತೀ ಸಣ್ಣ ರೈತರಿದ್ದಾರೆ. ನನ್ನಲ್ಲಿ ಎಲ್ಲಾ ಮಾಹಿತಿಯೂ ಇದೆ, ಕೃಷಿ ವಿಷಯದ ಮೇಲೆ ಮಾತನಾಡುವಾಗ ಅದನ್ನೂ ಹೇಳುತ್ತೇನೆ. ಅಗ್ರಿಕಲ್ಚರ್ ಲೇಬರ್ಸ್ ಎಷ್ಟು ಜನರಿದ್ದಾರೆ? ವ್ಯವಸಾಯಗಾರರು ಎಷ್ಟಿದ್ದಾರೆ? ನಾನು ಮಾಹಿತಿ ಇಲ್ಲದೆ ಏನೂ ಮಾತನಾಡುವುದಿಲ್ಲ ಮಾನ್ಯ ಉಪಮುಖ್ಯಮಂತ್ರಿಗಳೇ, ಆದರೆ ಇವತ್ತು ಆ ನೋಂದಣಿಯನ್ನು ಮಾಡಿದ್ದರಿಂದ ಬಹಳ ಜನ ನೋಂದಣಿ ಮಾಡಿಲ್ಲ. ಬಹಳ ಜನಕ್ಕೆ ಬಿತ್ತನೆ ಬೀಜಗಳು ದೊರೆಯುತ್ತಿಲ್ಲ ಆದ್ದರಿಂದ ಅದನ್ನು ಸಡಿಲಿಕೆ ಮಾಡಿ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಬಿತ್ತನೆಬೀಜಗಳನ್ನು ದೊರಕುವಂತೆ ಅವಕಾಶವನ್ನು ಕಲ್ಪಸಬೇಕು.

ಶ್ರೀ ಬಂಡೆಪ್ಪ ಕಾಶೆಂಪೂರ್ (ಕೃಷಿ ಸಚಿವರು) : ಈಗ ಮಾನ್ಯ ಸದಸ್ಯರು ನೋಂದಣಿ ಬಗ್ಗೆ ಹೇಳಿದರು. ತಮಗೆ ಹೇಳಬೇಕಾದರೆ ಇಡೀ ರಾಜ್ಯದಲ್ಲಿ ಒಂಬತ್ತೂವರೆ ಲಕ್ಷ ಜನ ನೋಂದಣಿ ಮಾಡಿಸಿದ್ದಾರೆ. ಆದರೂ ನಾವು ನೋಂದಣಿಗೆ ಅಷ್ಟು importance ಕೊಟ್ಟಿಲ್ಲ., ಏಕೆಂದರೆ ಎಲ್ಲಾ ಕಡೆಗಳಲ್ಲಿ ನೋಂದಣಿ ಆಗಿಲ್ಲ. ಇವತ್ತು ನಾವು ಟಾರ್ಗೆಟ್ ಇಟ್ಟುಕೊಂಡಿರುವುದು 15–16 ಲಕ್ಷ ಹೆಕ್ಟೇರ್‌ಗೆ ಅದರಲ್ಲಿ ಈವರೆಗೆ ಸುಮಾರು 11.50 ಲಕ್ಷ ರೈತರಿಗೆ ನಾವು ಕೊಟ್ಟಿದ್ದೇವೆ. ನೋಂದಣಿ ಮಾಡಿರುವವರಿಗೆ ಕೊಟ್ಟದ್ದರೆ ನಿನ್ನೆಯವರೆಗೆ 11.50 ಲಕ್ಷ ಜನ ಹೇಗೆ ಕ್ರಾಸ್ ಆಯಿತು? ನಾವು ನೋಂದಣಿಯನ್ನು ಏತಕ್ಕೆ ತಂದಿದ್ದೇವೆ ಎಂದರೆ ಈ ವರ್ಷ ಮುಂಗಾರು 15 ದಿವಸ ಮೊದಲೇ ಬಂದಿರುವುದರಿಂದ ಆ ಸ್ಕೀಮ್‌ಗೆ ಸ್ವಲ್ಪ ತೊಂದರೆಯಾಗಿದೆ. ಆದರೆ ಮುಂದಿನ ವರ್ಷ ರೈತರು ತನ್ನ ಏನು ಬೇಡಿಕೆಯಿದೆ, ತನ್ನ ಜಮೀನು ಎಷ್ಟು? ತನಗೆ ಯಾವ ಕಂಪನಿಯ ಬೀಜ ಬೇಕು ಎಂಬ ಬಗ್ಗೆ ಇಂಡೆಂಟ್ ಕೊಟ್ಟರೆ, ಈಗೇನು ಆರ್.ಎಸ್.ಕೆ. ಯಲ್ಲಿ ಗೊಂದಲ ನಡೆಯುತ್ತಿದೆ, ಅದನ್ನು ತೆಗೆದು ಹಾಕಿ ಆ ಇಂಡೆಂಟ್ ಮೂಲಕ ಅವನ ಊರಿಗೆ ಪ್ರಾಡಕ್ಟ್ಸ್ ಕಳುಹಿಸುವಂತಹ ವ್ಯವಸ್ಥೆಗೋಸ್ಕರ ಈ ನೋಂದಣಿಯನ್ನು ನಾವು ತಂದಿದ್ದೇವೆ, ಆದರೆ ಸಮಯಾಭಾವದಿಂದ ಕೇವಲ ಒಂಬತ್ತೂವರೆ ಲಕ್ಷ ಜನ ಮಾತ್ರ ನೋಂದಣಿ ಮಾಡಿದ್ದಾರೆ. ಅದಕ್ಕಾಗಿ ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ಅವರು ನೋಂದಣಿ ಮಾಡಿರುವಂತಹ ಕಂಪನಿಗಳು ಯಾವ್ಯಾವು ಇವೇ, ಅಲ್ಲಲ್ಲಿ ಅಂಥ ಜನರಿಗೆ importance ಕೊಟ್ಟು ಈ ವರ್ಷ ಸುಮಾರು 16 ಲಕ್ಷ ಜನರಿಗೆ ಸಬ್ಸಿಡಿ ಮೂಲಕ ಬಿತ್ತನೆ ಬೀಜವನ್ನು ನಾವು ಕೊಡುತ್ತಿದ್ದೇವೆ. ಇವತ್ತು ಇಡೀ ರಾಜ್ಯದಲ್ಲಿ ರೈತರು ಸಬ್ಸಿಡಿ

ಸ್ಕೀಮ್‌ನಲ್ಲಿ ಬಿತ್ತನೆ ಬೀಜವನ್ನು ತೆಗೆದುಕೊಂಡಿದ್ದಾರೆ. ಇಡೀ ರಾಜ್ಯದಲ್ಲಿ ಈ ಒಂದು ಸ್ಕೀಮ್ ಜನರ ಮೆಚ್ಚುಗೆಯನ್ನೂ ಪಡೆದಿದೆ. 22.00 ಲಕ್ಷ ಹೆಕ್ಟೇರ್‌ನಲ್ಲಿ 15–16 ಲಕ್ಷ ಹೆಕ್ಟೇರ್ಸ್‌ಗೆ ನಾವು ಅನುಕೂಲವಾಗುವಂತೆ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಫಾರ್ಮರ್ಸ್ ಲೆಕ್ಕದಲ್ಲಿ ಹೋದರೆ ಮೊನ್ನೆಯವರೆಗೆ ಸುಮಾರು 11.50 ಲಕ್ಷ ಜನರಿಗೆ ನಾವು ಕೊಟ್ಟಿದ್ದೇವೆ. ಆದರೆ ಕೇವಲ ಒಂಬತ್ತೂವರೆ ಲಕ್ಷ ಜನ ಮಾತ್ರ ನೋಂದಣಿ ಮಾಡಿರುವುದು, ಇನ್ನೂ ಭತ್ತ, ರಾಗಿ ಇವೆಲ್ಲಾ ಪೆಂಡಿಂಗ್ ಇವೆ. ಇನ್ನು ಬಹಳಷ್ಟು ಜನ ಭತ್ತ, ರಾಗಿಯನ್ನು ಒಯ್ಯುವವರು ಇದ್ದಾರೆ ಇದಕ್ಕೆ ಇನ್ನೂ ಎರಡು ತಿಂಗಳವರೆಗೆ ಅವಕಾಶವಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದಂತೆ ಇವತ್ತು ಈ ಸ್ಕೀಮ್‌ಗೆ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಇನ್ನೂ ಕಾಲಾವಕಾಶವಿದೆ. ಅವರಿಗೆ ನೋಂದಣಿ ಮಾಡಿಸಲಿಕ್ಕೆ ಯಾವುದೇ ರೀತಿಯ ಕೊರತೆಯಾಗದಂತೆ ಎಲ್ಲಾ ರೀತಿಯ ಕ್ರಮವನ್ನು ನಾವು ಕೈಗೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದರು, ನಮ್ಮಲ್ಲಿ ಟೋಟಲ್ ಹೋಲ್ಡಿಂಗ್ಸ್ ಸುಮಾರು 70.79 ಲಕ್ಷ ಜನ, ಮಾರ್ಜಿನಲ್ ಫಾರ್ಮರ್ಸ್ ಇರುವುದು 32.52 ಲಕ್ಷ ಜನ ಸ್ಮಾಲ್ 19.09 ಲಕ್ಷ ಜನ, ಸೆಮಿ ಮತ್ತು ಮೀಡಿಯಮ್ 12.59 ಲಕ್ಷ ಜನ, ನೀವು ನೋಂದಣಿ ಮಾಡಿರುವುದು ಒಂಬತ್ತೂವರೆ ಲಕ್ಷ ಇಲ್ಲಿ ಎಷ್ಟು ಲಕ್ಷ ಜನ ಇದ್ದಾರೆ? ನಾನು ಮಾಹಿತಿ ಇಲ್ಲದೆ ಮಾತನಾಡುವುದಿಲ್ಲ. ಮಾನ್ಯ ಉಪಮುಖ್ಯಮಂತ್ರಿಗಳು ನಾವು ಹಾಗೆ ಮಾತನಾಡುತ್ತೇವೆ ಎಂದರೆ ನಾವು ಮಾಹಿತಿ ಇಲ್ಲದೆ ಮಾತನಾಡುವುದೇ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಆ ರೀತಿ ಹೇಳಿಯೇ ಇಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ನೀವು ಆ ರೀತಿ ಹೇಳಿದರೆ ನಾವು ಮಾತನಾಡುವುದೇ ಇಲ್ಲ. ಬಾಯಿ ಮುಚ್ಚಿಕೊಂಡು ಇರುತ್ತೇವೆ. ಇವತ್ತು ನಿಮ್ಮ ಸರ್ಕಾರದಿಂದ ಕೊಟ್ಟಿರುವ ಫಿಗರ್ಸ್ ಇದು. ನನ್ನದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೋ, ನೋ., ನನ್ನ ಬಾಯಿಯಿಂದ ಆ ಪಾಯಿಂಟ್ ಬರಲೇ ಇಲ್ಲ. ನನ್ನ ಬಾಯಿಯಿಂದ ಏತಕ್ಕೆ ಹೇಳಿಸುತ್ತೀರಿ?

ಶ್ರೀ ಕೆ. ಶ್ರೀನಿವಾಸಗೌಡ : ನೀವು ಯಾವುದನ್ನೂ ಒಪ್ಪುವುದಿಲ್ಲ. ನಿಮಗೆ ಸಮಾಧಾನವಿರುವುದಿಲ್ಲ ಎಂದು ಹೇಳಿದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ, ನಿಮಗೆ ತೃಪ್ತಿಯಿರುವುದಿಲ್ಲ, ಒಳ್ಳೆಯದು ಅದು. ರೈತರ ಪರವಾಗಿ ಯಾವತ್ತು ನಿಮಗೂ ಹಾಗೂ ನನಗೂ ತೃಪ್ತಿಯಿರಬಾರದು. ಅವರು ಋಣ ತೀರಿಸಲಿಕ್ಕೆ ಎಷ್ಟು ಮಾಡಿದರೂ ಸಾಕಾಗುವುದಿಲ್ಲ. ಮಂತ್ರಿಗಳು ಉತ್ತರಿಸುವಾಗ ಏನು ಹೇಳಿದರು, ನೋಂದಣಿ ಮಾಡಿದವರಿಗೂ, ಮಾಡದವರಿಗೂ ಈ ಸವಲತ್ತು ಕೊಡುತ್ತಿದ್ದೇವೆ, ಅದಕ್ಕಾಗಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಹಾಗಿದ್ದ ಮೇಲೆ ನೀವು ಏತಕ್ಕೆ ಅಷ್ಟು ಜೋರಾಗಿ ಕಿರುಚಿಕೊಳ್ಳುತ್ತಿದ್ದೀರಿ. ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ ಯಾವುದೇ

ರಿಜಿಸ್ಟೇಷನ್ ಮಾಡಿಸದಿದ್ದರೂ ಅವರಿಗೆ ನಾವು ಸವಲತ್ತು ಕೊಡುತ್ತೇವೆ ಎಂದು ಸಚಿವರು ಹಾಗು ನಾನೂ ಹೇಳುತ್ತಿದ್ದೇನಲ್ಲಾ.

8. ವಿತ್ತೀಯ ಕಾರ್ಯಕಲಾಪ

ಉಪಾಧ್ಯಕ್ಷರು : ಈಗ 2006–07ನೇ ಸಾಲಿನ ಕೆಳಕಂಡ ಅನುದಾನ ಬೇಡಿಕೆಗಳ ಮಂಡನೆ.

ಅಭಿಯಾಚನೆ ಕ್ರಮಾಂಕ :1 – – ಕೃಷಿ ಮತ್ತು ತೋಟಾಗಾರಿಕೆ ಇಲಾಖೆ

ಶ್ರೀ ಬಂಡೆಪ್ಪ ಕಾಶೆಂಪುರ್ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.2007 ರಮದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **ಕೃಷಿ ಮತ್ತು ತೋಟಗಾರಿಕೆಗೆ** ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 110747.44 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ 8895.05 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ :2–– ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ಶ್ರೀ ಬಿ. ನಾಗರಾಜಶೆಟ್ಟಿ (ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, "ರಾಜ್ಯಪಾಲರ ಶೀಫಾರಸ್ಸಿನ ಮೇರೆಗೆ 31.3.2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **ಪಶುಸಂಗೋಪನೆ ಮತ್ತು ಮೀನುಗಾರಿಕೆಗೆ** ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 33171.65 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವು ಹಾಗೂ ಬಂಡವಾಳ ಖಾತೆಯಲ್ಲಿ 1140.00 ಲಕ್ಷ ರೂ.ಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಮಂಡಿಸುತ್ತೇನೆ."

ಅಭಿಯಾಚನೆ ಕ್ರಮಾಂಕ : 7 – – ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಶ್ರೀ ಎಂ.ಪಿ. ಪ್ರಕಾಶ್(ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) (ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, "ರಾಜ್ಯಪಾಲರ ಶೀಫಾರಸ್ಸಿನ ಮೇರೆಗೆ 31.3.2007 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಗೆ** ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 128396.77 ಲಕ್ಷ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಹಾಗೂ ಬಂಡವಾಳ ಖಾತೆಯಲ್ಲಿ